ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

13 ಜೂನ್, 2026 ಶನಿವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 94 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರು ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಶುಕ್ರವಾರ ಭೇಟಿ ನೀಡಿ ದರ್ಶನ ಪಡೆದರು.




ನಿಮ್ಮ ವೈದ್ಯರನ್ನು ಪ್ರಶ್ನಿಸುವ ಹಕ್ಕು ಚಲಾಯಿಸಿ » 2





ದೇಶದಾದ್ಯಂತ ಒಂದು ಕೋಟಿ ಬಾಲ ಕಾರ್ಮಿಕರು » 3

ಪ್ರತಿಷ್ಠೆಯ ಕಣವಾದ ಪರಿಷತ್ ಚುನಾವಣೆ » 4


# ನೀರಾವರಿಗೆ ಅನುಮತಿ-ಅನುದಾನ ನೀಡಿ

- ಕೇಂದ್ರ ಜಲಶಕ್ತಿ ಸಚಿವರಿಗೆ ಡಿ.ಕೆ.ಶಿವಕುಮಾರ್ ಕೋರಿಕೆ
- ಮೇಕೆದಾಟು, ಕೃಷ್ಣಾ-ಭದ್ರಾ, ಮಹಾದಾಯಿ ಯೋಜನೆ ಪ್ರಸ್ತಾಪ

• ಪ್ರಜೋದಯ ವರದಿ

**ನವದೆಹಲಿ:** ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಾದ ಮೇಕೆದಾಟು, ಕೃಷ್ಣಾ ಮೇಲ್ದಂಡೆ, ಭದ್ರಾ ಮೇಲ್ದಂಡೆ, ಮಹಾದಾಯಿ ಯೋಜನೆಗಳಿಗೆ ಅನುಮತಿ, ಅನುದಾನ ನೀಡಬೇಕೆಂದು ಕೋರಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಅವರೊಂದಿಗೆ ಶುಕ್ರವಾರ ಸಮಾಲೋಚನೆ ನಡೆಸಿದರು.

ಸುಪ್ರೀಂ ಕೋರ್ಟ್ 2025 ನವೆಂಬರ್ 11 ರಂದು ತಮಿಳುನಾಡು ರಾಜ್ಯದ ವಿವಿಧ ಅರ್ಜಿಗಳನ್ನು ವಜಾಗೊಳಿಸಿದೆ ಮತ್ತು ಮೇಕೆದಾಟು ಯೋಜನೆಯ ಅನುಮತಿಯ ಬಗ್ಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯೂಎಂಎ) ಮತ್ತು ಕೇಂದ್ರ ಜಲ ಆಯೋಗ (ಸಿಡಬ್ಲ್ಯೂಸಿ) ನಿರ್ಧಾರ ತೆಗೆದುಕೊಳ್ಳಬೇಕೆಂದು ಅಭಿಪ್ರಾಯಪಟ್ಟಿದೆ. ಸಿಡಬ್ಲ್ಯೂಎಂಎ ಈಗಾಗಲೇ ಯೋಜನೆಯನ್ನು ಮೌಲ್ಯಮಾಪನ ಮಾಡಲು ಸಿಡಬ್ಲ್ಯೂಸಿ ಗೆ ಸೂಚಿಸಿರುವುದರಿಂದ, ಈ ಯೋಜನೆಗೆ ಶೀಘ್ರ ಅನುಮತಿ ಸಿಗುವಂತೆ ನೋಡಿಕೊಳ್ಳಬೇಕೆಂದು ಮನವಿ ಮಾಡಿದ್ದಾರೆ.

ಕೃಷ್ಣಾ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ, ಕೃಷ್ಣಾ ನೀರು ವಿವಾದ ನ್ಯಾಯಾಧೀಕರಣ- (ಕೆಡಬ್ಲ್ಯುಟಿ-II) ತೀರ್ಪು ನೀಡಿ ಒಂದು ದಶಕಕ್ಕೂ ಹೆಚ್ಚು ಕಾಲ ಕಳೆದಿದ್ದರೂ, ಕೇಂದ್ರ ಸರ್ಕಾರ ಇನ್ನು ಸಹ ಈ ತೀರ್ಪನ್ನು ಗೆಜೆಟ್‌ನಲ್ಲಿ ಅಧಿಸೂಚಿಸಿಲ್ಲ. ಕರ್ನಾಟಕ ರಾಜ್ಯವು ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-II ರ ಅನುಷ್ಠಾನದಲ್ಲಿ ಭಾರೀ ಮೊತ್ತವನ್ನು ಹೂಡಿಕೆ ಮಾಡಿದೆ ಮತ್ತು ನಮ್ಮ ಯೋಜನೆಯನ್ನು ಮುಂದುವರಿಸಲು ಹಾಗು ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಲು ಕೇಂದ್ರದ ಬೆಂಬಲದ ಅಗತ್ಯವಿದೆ ಎಂದು ತಿಳಿಸಿದರು.



**ರಾಷ್ಟ್ರಪತಿ, ಉಪ ರಾಷ್ಟ್ರಪತಿ ಭೇಟಿ**

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶುಕ್ರವಾರ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣಾ ಅವರನ್ನು ಭೇಟಿ ಮಾಡಿದರು. ಬಳಿಕ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಸಮಾ ಲೋಚನೆ ನಡೆಸಿದರು. ಗುರುವಾರ ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿದ್ದರು.

**ಅನುದಾನ ಬಿಡುಗಡೆಗೆ ಮನವಿ**

ಭದ್ರಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರವು 2023-24 ರ ಕೇಂದ್ರ ಬಜೆಟ್‌ನಲ್ಲಿ 5,300 ಕೋಟಿ ರೂ.ಗಳ ನೆರವನ್ನು ಘೋಷಿಸಿತ್ತು. ಆದರೆ, 3 ವರ್ಷಗಳು ಕಳೆದರೂ ರಾಜ್ಯಕ್ಕೆ ಈ ಹಣಕಾಸಿನ ನೆರವು ಬಿಡುಗಡೆಯಾಗಿಲ್ಲ. ಈ ಯೋಜನೆಯ 21,167.93 ಕೋಟಿ ರೂ.ಗಳ ಪರಿಷ್ಕೃತ ವೆಚ್ಚದ ಅಂದಾಜಿನ ಪ್ರಸ್ತುತ ಪ್ರಸ್ತಾವನೆಯನ್ನು ಮೌಲ್ಯಮಾಪನ ಮಾಡಿದೆ. ಪಿಎಂಕೆಎಸ್‌ವೈ-ಎಐಬಿಪಿ ಯೋಜನೆಯಡಿ ಈ ಯೋಜನೆಗೆ ಕೇಂದ್ರದ ನೆರವನ್ನು ಶೀಘ್ರ ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ.

**ಮಹಾದಾಯಿ, ಕಳಸಾ-ಬಂಡೂರಿ ಪ್ರಸ್ತಾಪ**

ಮಹಾದಾಯಿ ಕಣಿವೆಯಡಿ ಬರುವ ಕಳಸಾ ಮತ್ತು ಬಂಡೂರಿ ನಾಲಾ ಯೋಜನೆಗಳನ್ನು ಹುಬ್ಬಳ್ಳಿ-ಧಾರವಾಡದ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು ಉದ್ದೇಶಿಸಲಾಗಿದೆ. ಇವುಗಳಿಗೆ ಡಿಸೆಂಬರ್ 2022 ರಲ್ಲಿ ಸಿಡಬ್ಲ್ಯೂಸಿ, ಜಲಶಕ್ತಿ ಸಚಿವಾಲಯವು ಅನುಮತಿ ನೀಡಿದ್ದರೂ, ಈ ಯೋಜನೆಗೆ ಯಾವುದೇ


» ಮೂರನೇ ಪುಟದಲ್ಲಿ


**ನದಿ ಜೋಡಣೆಗೆ ನ್ಯಾಯಯುತ ಪಾಲು ಬೇಕು**

ಕೇಂದ್ರ ಸರ್ಕಾರದ ನದಿಗಳ ಜೋಡಣೆಯ ಪ್ರಸ್ತಾವನೆಗಳ ಅಡಿಯಲ್ಲಿ, ನದಿ ಜೋಡಣೆ (ಐಎಲ್‌ಆರ್) ಯೋಜನೆಗಳಿಂದ ಸಮತೆ ಮತ್ತು ಸಮಾನ ಹಂಚಿಕೆಯ ತತ್ವದ ಮೇಲೆ ಕರ್ನಾಟಕ ರಾಜ್ಯಕ್ಕೆ ನ್ಯಾಯಸಮ್ಮತವಾದ ಪಾಲನ್ನು ಹಂಚಿಕೆ ಮಾಡಬೇಕು ಎಂದು ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಸಚಿವರ ಬಳಿ ಮನವಿ ಮಾಡಿಕೊಂಡಿದ್ದಾರೆ.

# ಸಮರ್ಪಕ ರಸಗೊಬ್ಬರ ಪೂರೈಕೆಗೆ ಆಗ್ರಹಿಸಿ ಪ್ರತಿಭಟನೆ

**ಬೆಲೆ ಏರಿಕೆ, ದಾಸ್ತಾನು ಇಲ್ಲದೆ ತೊಂದರೆ | ರೈತರ ಸಮಸ್ಯೆಗೆ ಸ್ಪಂದಿಸಲು ಆಗ್ರಹ**

• ಪ್ರಜೋದಯ ವರದಿ

**ಹಾಸನ:** ಮುಂಗಾರು ಬಿತ್ತನೆ ಅವಧಿಯಲ್ಲಿ ರಸಗೊಬ್ಬರಕ್ಕೆ ಅಭಾವವಾಗದಂತೆ ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ರಾಜ್ಯ ರೈತ ಸಂಘ ಹಸಿರು ಸೇನೆಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಗೊಬ್ಬರ ಕೊರತೆ, ಬಿತ್ತನೆ ಬೀಜಗಳ ಅಭಾವ, ಕೃಷಿ ಉತ್ಪನ್ನಗಳಿಗೆ ಸೂಕ್ತ ಬೆಲೆ ಸಿಗದಿರುವುದು ಸೇರಿ ಅನೇಕ ಸಮಸ್ಯೆಗಳಿಂದ ರೈತರು ನಲುಗಿದ್ದಾರೆ. ರೈತರನ್ನು ಸಂಕಷ್ಟಕ್ಕೆ ಸಿಲುಕಿಸುವ ಪ್ರಯತ್ನ ನಡೆಯಬಾರದೆಂದರು.

ರೈತ ಸಂಘದ ಜಿಲ್ಲಾಧ್ಯಕ್ಷ ಬಾಬು ಅವರು ಮಾತನಾಡಿ, ರಾಜ್ಯದಲ್ಲಿ ಗೊಬ್ಬರದ ಬೆಲೆ ನಿರಂತರ ಏರಿಕೆಯಾಗುತ್ತಿದ್ದು, ಹಿಂದೆ ಸುಮಾರು 1,300ಕ್ಕೆ ದೊರೆಯುತ್ತಿದ್ದ ಗೊಬ್ಬರದ ಚೀಲ ಈಗ 2,200ಕ್ಕೆ ಏರಿಕೆಯಾಗಿದೆ ಎಂದರು.

ಒಂದು ಎಕರೆ ಕೃಷಿ ಭೂಮಿಗೆ ನಾಲ್ಕು ಚೀಲ ಗೊಬ್ಬರ ಅಗತ್ಯವಿದ್ದರೂ ಸರ್ಕಾರ ಕೇವಲ ಒಂದು ಚೀಲ ಮಾತ್ರ ವಿತರಿಸುತ್ತಿದೆ. ಅಗತ್ಯ ಪ್ರಮಾಣದ ಗೊಬ್ಬರವಿಲ್ಲದೆ ಬೆಳೆ ಬೆಳೆಯಲು ಪರದಾಡುವಂತಾಗಿದೆ. ಮಳೆಗಾಲ ಆರಂಭವಾಗಿ ಬಿತ್ತನೆ ಚಟುವಟಿಕೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ಗೊಬ್ಬರ ಲಭ್ಯವಾಗದಿದ್ದರೆ ಕೃಷಿ ಕಾರ್ಯ ಸಂಪೂರ್ಣ ಅಸ್ತವ್ಯಸ್ತವಾಗಲಿದೆ. ಹೆಚ್ಚಿನ ಹಣ ನೀಡಿ ಖರೀದಿಸಲು ಮುಂದಾದರೂ ಗೊಬ್ಬರ ಸಿಗದ ಪರಿಸ್ಥಿತಿ ನಿರ್ಮಾಣವಾಗಿದ್ದು, ಸಣ್ಣ ಮತ್ತು ಅತಿ ಸಣ್ಣ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆಂದರು.

ಕೃಷಿ ಇಲಾಖೆಯಲ್ಲಿ ಗುಣಮಟ್ಟದ ಬಿತ್ತನೆ ಬೀಜ ಬದಲಿಗೆ ಲಿಕ್ವಿಡ್ ಉತ್ಪನ್ನಗಳನ್ನು ನೀಡಲಾಗುತ್ತಿದೆ. ಅವುಗಳಿಂದ ನಿರೀಕ್ಷಿತ ಪ್ರಮಾಣದಲ್ಲಿ ಬೆಳೆ ಬೆಳೆಯಲು ಸಾಧ್ಯವಾಗುತ್ತಿಲ್ಲ. ಸರ್ಕಾರ ರೈತರಿಗೆ ಅಗತ್ಯವಿರುವ ಯೂರಿಯಾ, ಗೊಬ್ಬರ ಹಾಗೂ ಬಿತ್ತನೆ ಬೀಜಗಳನ್ನು ಸಮರ್ಪಕ ಪ್ರಮಾಣದಲ್ಲಿ ಸಬ್ಸಿಡಿ ದರದಲ್ಲಿ ವಿತರಿಸಬೇಕೆಂದು ಒತ್ತಾಯಿಸಿದರು.

ಗೊಬ್ಬರ ಖರೀದಿಸಲು ರೈತರು ಹಣ ಹಿಡಿದು ಸೊಸೈಟಿಗಳ ಮುಂದೆ ದಿನವಿಡೀ ಸಾಲಿನಲ್ಲಿ ನಿಂತರೂ ಕೆವೈಸಿ ಪೂರ್ಣಗೊಂಡಿಲ್ಲವೆಂಬ ನೆಪ ಹೇಳಿ ವಾಪಾಸ್ ಕಳುಹಿಸಲಾಗುತ್ತಿದೆ. ಇನ್ನೊಂದೆಡೆ ಕಾಳಸಂತೆಯಲ್ಲಿ


» ನಾಲ್ಕನೇ ಪುಟದಲ್ಲಿ




# ನಿವೃತ್ತ ಯೋಧ ರಂಗಸ್ವಾಮಿ ನಿಧನ

• ಪ್ರಜೋದಯ ವರದಿ

**ಆಲೂರು:** ತಾಲ್ಲೂಕಿನ ಕೆ. ಹೊಸಕೋಟೆ ಹೋಬಳಿ ಮಾದೀಹಳ್ಳಿ ಗ್ರಾಮದ ನಿವೃತ್ತ ಸಿಆರ್‌ಪಿಎಫ್ ಯೋಧ ರಂಗಸ್ವಾಮಿ (52) ಅವರು ಶುಕ್ರವಾರ ನಿಧನರಾಗಿದ್ದಾರೆ.

ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಅವರನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮೃತರಿಗೆ ಪತ್ನಿ ಹಾಗು ಇಬ್ಬರು ಮಕ್ಕಳಿದ್ದಾರೆ. ಕುಂದೂರು ಹೋಬಳಿ ಮನಿಗನಹಳ್ಳಿ ಗ್ರಾಮದಲ್ಲಿ ಶನಿವಾರ ಅಂತ್ಯಕ್ರಿಯೆ ನೆರವೇರಲಿದೆ.



ಕೇಂದ್ರೀಯ ಮೀಸಲು ಪೊಲೀಸ್ ಪಡೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ಉಗ್ರವಾದಿಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಗಾಯಗೊಂಡು ಬೆನ್ನುಹುರಿ ಹಾಗು ಜಠರ ಸಮಸ್ಯೆಗೆ ತುತ್ತಾಗಿದ್ದರು. ಐದು ವರ್ಷಗಳ ಕಾಲ ನವದೆಹಲಿಯ ಏಮ್ಸ್‌ನಲ್ಲಿ ಚಿಕಿತ್ಸೆ ಪಡೆದು ಆರೋಗ್ಯದಲ್ಲಿ ಚೇತರಿಕೆ ಕಂಡು ಬರದ ಹಿನ್ನಲೆಯಲ್ಲಿ ಸೇವೆಯಿಂದ ಸ್ವಯಂ ನಿವೃತ್ತಿ ಪಡೆದಿದ್ದರು. ಇತ್ತೀಚೆಗೆ ಅನಾರೋಗ್ಯ ಬಿಗಡಾಯಿಸಿದ್ದರಿಂದ ಆಸ್ಪತ್ರೆಗೆ ದಾಖಲಿಸಲಾಗಿತ್ತು.

## ರಾಜ್ಯದಾದ್ಯಂತ ಜೂ.28 ರಂದು ಪಲ್ಸ್ ಪೋಲಿಯೋ

• ಪ್ರಜೋದಯ ವರದಿ

**ಹಾಸನ :** ರಾಜ್ಯದ 0 ರಿಂದ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಲಸಿಕೆ ನೀಡುವ ಉದ್ದೇಶದಿಂದ ಜೂನ್ 28 ರಂದು ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

## ಇಂದು ಸರ್ವ ಸದಸ್ಯರ ಸಭೆ

ಹಾಸನ: ಜಿಲ್ಲಾ ನಿವೃತ್ತ ನೌಕರರ ಸಂಘದ ಸರ್ವ ಸದಸ್ಯರ ಸಭೆ ಶನಿವಾರ ಬೆಳಿಗ್ಗೆ 11 ಗಂಟೆಗೆ ಸಂಘದ ಸಭಾಂಗಣದಲ್ಲಿ ಸಂಘದ ಅಧ್ಯಕ್ಷ ಎಸ್.ಬೋರೇಗೌಡ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ. ಎಲ್ಲಾ ಪದಾಧಿಕಾರಿಗಳು ಹಾಗು ಸಂಘದ ಸದಸ್ಯರು ಭಾಗವಹಿಸುವಂತೆ ಕೋರಲಾಗಿದೆ.

# ಬರಿದಾಗುತ್ತಿದೆ ಹೇಮಾವತಿ ಅಣೆಕಟ್ಟೆ ಒಡಲು

**ಜಲಾಶಯದಲ್ಲಿ ಬಳಕೆಗೆ ಲಭ್ಯವಿರುವುದು ಕೇವಲ 10 ಟಿಎಂಸಿ ನೀರು | ಕಳೆದ ವರ್ಷ ಇದೇ ಸಮಯದಲ್ಲಿ 24 ಟಿಎಂಸಿ ಸಂಗ್ರಹ**

• ಪ್ರಜೋದಯ ವರದಿ

**ಹಾಸನ :** ಪೂರ್ವ ಮುಂಗಾರಿನ ಕೊರತೆ ಪರಿಣಾಮ ಜಿಲ್ಲೆಯ ಹೇಮಾವತಿ ಜಲಾಶಯದ ಒಡಲು ಬರಿದಾಗುತ್ತಿದೆ. ಹೇಮಾವತಿ ಅಣೆಕಟ್ಟೆ 37.103 ಟಿಎಂಸಿ ನೀರಿನ ಸಂಗ್ರಹಣಾ ಸಾಮರ್ಥ್ಯ ಹೊಂದಿದ್ದು, ಪ್ರಸ್ತುತ 14,586 ಟಿಎಂಸಿ ನೀರು ಸಂಗ್ರಹವಿದೆ.

4.5 ಟಿಎಂಸಿ ನೀರು ಡೆಡ್ ಸ್ಟೋರೇಜ್ ಆಗಿರುವುದರಿಂದ ಬಳಸಲು ಆಗುವುದಿಲ್ಲ. ಕೇವಲ 10 ಟಿಎಂಸಿ ಮಾತ್ರ ಅಣೆಕಟ್ಟೆಯಲ್ಲಿ ಬಳಕೆಗೆ ನೀರು ಲಭ್ಯವಿದೆ. ಕಳೆದ ವರ್ಷ ಪೂರ್ವ ಮುಂಗಾರಿನ ಆರ್ಭಟ ಜೋರಾಗಿದ್ದರಿಂದ ಇದೇ ಸಮಯದಲ್ಲಿ ಜಲಾಶಯದಲ್ಲಿ 24, 711 ಟಿಎಂಸಿ ನೀರು ಸಂಗ್ರಹವಾಗಿತ್ತು.

ಈ ಬಾರಿ ಮುಂಗಾರು ಕ್ಷೀಣಿಸಲಿದೆ ಎಂಬ ವರದಿಗಳು ಬರುತ್ತಿರುವುದರಿಂದ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದಿದ್ದರೆ ಕುಡಿಯುವ ನೀರಿಗೂ ಸಮಸ್ಯೆ ಎದುರಾಗಲಿದೆ. ಬೇಸಿಗೆಯಲ್ಲಿ ಕರೆ-ಕಟ್ಟೆಗಳು ಬರಿದಾಗಿದ್ದರಿಂದ ಈಗಾಗಲೇ ಹೇಮಾವತಿ ಎಡದಂಡೆ ನಾಲೆ ಮೂಲಕ ನೀರು ಹರಿಸಿ ಜನ-ಜಾನುವಾರು ಬಳಕೆಗೆ ನೀರಿನ ಅನುಕೂಲ ಮಾಡಿಕೊಡಲಾಗಿದೆ. ಜಲಾಶಯದಲ್ಲಿ ನೀರಿನ ಮಟ್ಟ ಕ್ಷೀಣಿಸುತ್ತಿರುವುದರಿಂದ ಆತಂಕ ಎದುರಾಗಿದೆ.



**ಕಳೆದ ವರ್ಷ ಮೇ ತಿಂಗಳಲ್ಲೇ ಯಗಚಿ ಭರ್ತಿ**

ಕಳೆದ ವರ್ಷ ಮುಂಗಾರು ಆರಂಭಕ್ಕೂ ಮೊದಲೇ ಪೂರ್ವ ಮುಂಗಾರಿನ ಆರ್ಭಟಕ್ಕೆ ಯಗಚಿ ಜಲಾಶಯ ಭರ್ತಿಯಾಗಿ, ಮೇ 24 ರಂದು ಶಾಸಕ ಹೆಚ್.ಕೆ.ಸುರೇಶ್ ಅವರು ಬಾಗಿನ ಅರ್ಪಿಸಿದ್ದರು. ಜಿಲ್ಲೆಯ ಅತೀ ಚಿಕ್ಕ ಜಲಾಶಯವಾಗಿರುವ ಆಲೂರು ತಾಲ್ಲೂಕಿನ ವಾಟೆಹೊಳೆ ಜಲಾಶಯವೂ ಮೇ ತಿಂಗಳ ಅಂತ್ಯದ ವೇಳೆಗೆ ಭರ್ತಿಯಾಗಿತ್ತು. ಆದರೆ, ಈ ವರ್ಷ ಪೂರ್ವ ಮುಂಗಾರು ಕೈಕೊಟ್ಟಿದ್ದರಿಂದ ಯಗಚಿ, ವಾಟೆಹೊಳೆ ಜಲಾಶಯಗಳಲ್ಲೂ ನೀರಿನ ಪ್ರಮಾಣ ಅಷ್ಟಿಲ್ಲ.

**(ಹೇಮಾವತಿ ಜಲಾಶಯದ ನೀರಿನ ಮಟ್ಟ)**

| | ಕಳೆದ ವರ್ಷ | ಪ್ರಸ್ತುತ |
|---|---|---|
| ನೀರಿನ ಸಂಗ್ರಹ | 2907 ಅಡಿ | 2890 ಅಡಿ |
| ಟಿಎಂಸಿ | 24 ಟಿಎಂಸಿ | 14 ಟಿಎಂಸಿ |
| ಒಳಹರಿವು | 1412 ಕ್ಯೂ | 563 ಕ್ಯೂ |
| ಹೊರಹರಿವು | 300 ಕ್ಯೂ | 350ಕ್ಯೂ |

**ರೈತರಲ್ಲಿ ಆತಂಕ**

ಹೇಮಾವತಿ ಅಣೆಕಟ್ಟೆ ಹಾಸನ ಜಿಲ್ಲೆ ಮಾತ್ರವಲ್ಲದೇ, ತುಮಕೂರು, ಮಂಡ್ಯ, ಮೈಸೂರು ಜಿಲ್ಲೆಯ ಭಾಗದ 6.55 ಲಕ್ಷ ಹೆಕ್ಟೇರ್ ಪ್ರದೇಶದ ಕೃಷಿ ಭೂಮಿಗೆ ನೀರೊದಗಿಸುತ್ತದೆ. ಜಲಾಶಯದಲ್ಲೇ ನೀರು ಕ್ಷೀಣಿಸುತ್ತಿರುವುದರಿಂದ ನಾಲೆ ನೀರನ್ನೇ ಆಶ್ರಯಿಸಿ ಕೃಷಿ ಮಾಡುವ ರೈತರಿಗೆ ಆತಂಕ ಶುರುವಾಗಿದೆ.

ತುಮಕೂರು ಜಿಲ್ಲೆಯಲ್ಲಿ 3.18 ಲಕ್ಷ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶ ಹೊಂದಿರುವ ಹೇಮಾವತಿ ಯೋಜನೆ ಆ ಜಿಲ್ಲೆಯ ಕೇಂದ್ರ ತುಮಕೂರು ನಗರಕ್ಕೂ ಕುಡಿಯುವ ನೀರಿಗೆ ಆಶ್ರಯವಾಗಿದೆ. ಜೊತೆಗೆ ತಿಪಟೂರು, ತುರುವೇಕೆರೆ, ಗುಬ್ಬಿ, ಶಿರಾ ಸೇರಿ ಹಲವು ಪಟ್ಟಣಗಳೂ ಕುಡಿಯುವ ನೀರಿಗೆ ಹೇಮಾವತಿ ಜಲಾಶಯವೇ ಮೂಲವಾಗಿದೆ. ಮಂಡ್ಯ ಜಿಲ್ಲೆಯಲ್ಲಿ 2.30 ಲಕ್ಷ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶ ಹೊಂದಿರುವ ಹೇಮಾವತಿ ಜಲಾಶಯವು ನಾಗಮಂಗಲ, ಕೆ.ಆರ್.ಪೇಟೆ, ಪಾಂಡವಪುರ ಪಟ್ಟಣಗಳಿಗೆ ಕುಡಿಯುವ ನೀರು ಪೂರೈಸುತ್ತದೆ.

ಹಾಸನ ಜಿಲ್ಲೆಯ 1.10 ಲಕ್ಷ ಹೆಕ್ಟೇರ್ ಅಚ್ಚುಕಟ್ಟು ಜೊತೆಗೆ ಅರಸೀಕೆರೆ, ಚನ್ನರಾಯಪಟ್ಟಣ, ಹಾಸನ, ಸಕಲೇಶಪುರ, ಅರಕಲಗೂಡು, ಹೊಳೆನರಸೀಪುರ ಪಟ್ಟಣಕ್ಕೆ ಕುಡಿಯುವ ನೀರು ಪೂರೈಸುವ ಏಕೈಕ ಜಲ ಮೂಲವಾಗಿದೆ. ಎಡದಂಡೆ ಮತ್ತು ಬಲದಂಡೆ ನಾಲೆ ಮೂಲಕ ಕೃಷಿ ಭೂಮಿಗೆ ನೀರು ಒದಗಿ ಸುವ ಜೊತೆಗೆ ಅರಕಲಗೂಡು, ಬಾಗೂರು-ನವಿಲೆಗೆ ಏತ ನೀರಾವರಿ ಮೂಲಕವೂ ನೀರು ಹರಿಯುತ್ತದೆ. ಮಳೆ ಕೊರತೆಯಿಂದ ಕೃಷಿ ಮಾತ್ರವಲ್ಲದೇ ಕುಡಿಯುವ ನೀರಿಗೂ ಆತಂಕ ಎದುರಾಗಿದೆ.

**ಕಾವೇರಿ ಕೊಳ್ಳದಲ್ಲೂ ಭೀತಿ**

ಕಾವೇರಿ ಕೊಳ್ಳದ ಹೇಮಾವತಿ ಮಾತ್ರವಲ್ಲದೇ ಕೆಆರ್‌ಎಸ್, ಕಬಿನಿಯಲ್ಲೂ ಇದೇ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಆರ್‌ಎಸ್ ಅಣೆಕಟ್ಟೆಯಲ್ಲೂ ಕೇವಲ 11 ಟಿಎಂಸಿ ಮಾತ್ರ ನೀರಿದೆ. ಇದರಲ್ಲಿ 4 ರಿಂದ 5 ಟಿಎಂಸಿ ನೀರು ಡೆಡ್ ಸ್ಟೋರೇಜ್ ಆಗಿದ್ದು, ಬಳಕೆಗೆ ಲಭ್ಯವಿರುವುದು ಕೇವಲ 7 ಟಿಎಂಸಿ ಮಾತ್ರ. ಈ ಪರಿಸ್ಥಿತಿಯ ನಡುವೆ, ಜೂನ್ ತಿಂಗಳಿನಲ್ಲಿ ತಮಿಳುನಾಡಿಗೆ ನ್ಯಾಯಾಲಯದ ಸೂಚನೆಯಂತೆ 9 ಟಿಎಂಸಿ ನೀರನ್ನು ಬಿಡುಗಡೆ ಮಾಡಬೇಕಾದ ಅನಿವಾರ್ಯತೆ ಇದೆ. ಲಭ್ಯವಿರುವ ನೀರಿಗಿಂತ ಹೆಚ್ಚಿನ ನೀರನ್ನು ಬಿಡುಗಡೆ ಮಾಡುವ ಒತ್ತಡವೂ ಇದೆ. ತಮಿಳುನಾಡಿಗೆ ನೀರು ಹರಿಸಲೇಬೇಕಾದ ಪರಿಸ್ಥಿತಿ ಎದುರಾದರೆ ಹೇಮಾವತಿ ಜಲಾಶಯದಿಂದಲೂ ನೀರು ಖಾಲಿಯಾಗಿದೆ.

# ಮಂಜೇಶ್ ಕೊಲೆ ಮಾಡಿ ಲಾಡ್ಜ್‌ನಲ್ಲಿದ್ದ ಆರೋಪಿಗಳು

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ನ್ಯಾಯಾಲಯ ಸಂಕೀರ್ಣದ ಎದುರು ಭಾನುವಾರ ರಾತ್ರಿ ರೌಡಿಶೀಟರ್ ಮಂಜೇಶ್‌ನ ಕೊಲೆ ಮಾಡಿದ್ದ ಆರೋಪಿಗಳು ಬೇಲೂರಿನ ಚನ್ನಕೇಶವ ಲಾಡ್ಜ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಕ್ಷಿಪ್ರ ಕಾರ್ಯಾಚರಣೆಯ ಮೂಲಕ ಐವರನ್ನು ಬಂಧಿಸಿದ ತಕ್ಷಣವೇ ಉಳಿದ ಐವರು ಸ್ವಯಂ ವಿಡಿಯೋ ಮೂಲಕ ಶರಣಾಗತಿಯ ಸಂದೇಶ ರವಾನಿಸಿದ್ದರೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಅವರು ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಪ್ರಕರಣ ಸಂಬಂಧ ಈವರೆಗೆ 10 ಜನರನ್ನು ಬಂಧಿಸಿ ನ್ಯಾಯಾಲಯದ ಅನುಮತಿ ಪಡೆದು ವಿಚಾರಣೆಗೆ ಒಳಪಡಿಸಲಾಗಿದೆ. ಮುಂದಿನ 12 ದಿನಗಳವರೆಗೆ ವಿಚಾರಣೆ ನಡೆಸಲು ಸಮಯಾವಕಾಶವಿದ್ದು, ಇನ್ನಷ್ಟು ಮಾಹಿತಿ ಹಾಗು ಪ್ರಮುಖ ಆರೋಪಿಯ ಬಗ್ಗೆ ತಿಳಿದುಬರುವ ಸಾಧ್ಯತೆ ಇದೆ ಎಂದರು.

ಲಾಡ್ಜ್‌ನಲ್ಲಿ ತಂಗಿದ್ದ ಮೈಸೂರಿನ ಆಕಾಶ್ (ಬಿಕಾಂ ವಿದ್ಯಾರ್ಥಿ), ರಾಕೇಶ್, ಜಯಂತ್, ಆದಿತ್ಯ ಹಾಗ ಬೆಂಗಳೂರಿನ ವಿಕಾಸ್ ಎಂಬುವವರನ್ನು ಬಂಧಿಸಲಾಯಿತು. ಇನ್ನು ತುಮಕೂರಿನ ಪುನೀತ್‌ಕುಮಾರ್, ಮಂಡ್ಯದ ಶಶಿಧರ್, ಬೆಂಗಳೂರಿನ ಭರತ್, ಸಾಯಿಕುಮಾರ್ ಹಾಗು ಯಲ್ಲಾಲಿಂಗ ಎಂಬುವವರು ಸ್ವಯಂ ಪ್ರೇರಿತರಾಗಿ ಶರಣಾಗಿದ್ದಾರೆ. ಬಂಧಿತರಲ್ಲಿ ಬಹುತೇಕರು ಕ್ಯಾಬ್ ಡ್ರೈವರ್ ಕೆಲಸ ಹಾಗು ನಿರುದ್ಯೋಗಿಗಳಿದ್ದಾರೆ. ಬಂಧಿತರಿಗೂ ಮೃತ ಮಂಜೇಶ್‌ಗೂ ಯಾವ ರೀತಿಯ ಸಂಬಂಧವಿತ್ತು ಎಂಬುದರ ಕುರಿತು ತನಿಖೆ ನಡೆಯುತ್ತಿದೆ ಎಂದರು.

**ಬಂಧಿತರ ವಿರುದ್ಧ ಪ್ರಕರಣ**

ಬಂಧಿತ ಪುನೀತ್ ವಿರುದ್ಧ ಮೈಸೂರು ಹಾಗು ಬೆಂಗಳೂರಿನಲ್ಲಿ ಕೊಲೆ ಮತ್ತು ಜೆಪಿ ನಗರ ಠಾಣೆಯಲ್ಲಿ ಕೊಲೆ ಪ್ರಯತ್ನ ಸೇರಿ 4 ಪ್ರಕರಣಗಳಿವೆ. ವಿಕಾಸ್ ವಿರುದ್ಧ ಕಾಟನ್‌ಪೇಟೆ ಠಾಣೆಯಲ್ಲಿ ಡಕಾಯಿತಿ ಪ್ರಕರಣ, ಜಯಂತ್ ವಿರುದ್ಧ ಮೈಸೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.


» ನಾಲ್ಕನೇ ಪುಟದಲ್ಲಿ


## ಜೂ. 16ಕ್ಕೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ

ಬೆಂಗಳೂರು: ಕರ್ನಾಟಕ ವಿಧಾನ ಪರಿಷತ್ತಿನ ದ್ವೈವಾರ್ಷಿಕ ಚುನಾವಣೆ ಹಿನ್ನಲೆಯಲ್ಲಿ ರಾಜಕೀಯ ಚಟುವಟಿಕೆಗಳನ್ನು ಚುರುಕುಗೊಳಿಸಿದ್ದು, ಜೂ.16ರಂದು ಶಾಸಕಾಂಗ ಪಕ್ಷದ ಸಭೆ ನಿಗದಿಪಡಿಸಿದೆ. ಮಂಗಳವಾರ ಸಂಜೆ 6 ಗಂಟೆಗೆ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮ ನಗರ ತಾಲ್ಲೂಕಿನ ಬಿಡದಿ ಬಳಿ ಇರುವ ವಂಡರ್‌ಲಾ ರೆಸಾರ್ಟ್‌ನಲ್ಲಿ ಸಭೆ ಆಯೋಜನೆಗೊಂಡಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಭೆ ನಡೆಯಲಿದೆ. ಪಕ್ಷದ ಹೈಕಮಾಂಡ್ ನಾಯಕರು, ಮುಖಂಡರು ಭಾಗವಹಿಸಲಿದ್ದಾರೆ.

# ನೀಟ್ ಅಕ್ರಮ ಖಂಡಿಸಿ ಯುವ ಕಾಂಗ್ರೆಸ್ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಮೂಲಕ ದೇಶದ 23 ಲಕ್ಷ ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಕೇಂದ್ರ ಸರ್ಕಾರ ಚೆಲ್ಲಾಟವಾಡುತ್ತಿದೆ ಎಂದು ಆರೋಪಿಸಿ ಯುವ ಕಾಂಗ್ರೆಸ್ ಜಿಲ್ಲಾ ಘಟಕದಿಂದ ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಸಮೀಪದ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಾಯಿತು.

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಗಂಭೀರ ಪ್ರಕರಣ ನಡೆದರೂ ಪ್ರಧಾನಿ ನರೇಂದ್ರ ಮೋದಿ ಹಾಗು ಸಚಿವ ಧರ್ಮೇಂದ್ರ ಪ್ರಧಾನ್ ಮಾತನಾಡದಿರುವುದು ಶೋಚನೀಯ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಲೋಪದೋಷಗಳಾದಾಗ ಪ್ರತಿಕ್ರಿಯೆ ನೀಡುವುದು, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವುದು ಜವಾಬ್ದಾರಿ. ಕೇಂದ್ರ ಸರ್ಕಾರ ಈ ವಿಚಾರವಾಗಿ ಗಮನ ಹರಿಸುತ್ತಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ವೈದ್ಯಕೀಯ, ದಂತ ವೈದ್ಯಕೀಯ ಶಿಕ್ಷಣ ಕ್ಷೇತ್ರಕ್ಕೆ ಪ್ರವೇಶ ಪಡೆಯಲು


» ನಾಲ್ಕನೇ ಪುಟದಲ್ಲಿ




## ಅಕ್ರಮ ಸಂಬಂಧ ಆರೋಪ: ಮಹಿಳೆ ಆತ್ಮಹತ್ಯೆ

• ಪ್ರಜೋದಯ ವರದಿ

**ಹಾಸನ:** ಯುವಕನೊಂದಿಗೆ ಅಕ್ರಮ ಸಂಬಂಧ ಹೊಂದಿದ್ದರೆಂಬ ಆರೋಪದ ಹಿನ್ನಲೆ ಮನನೊಂದ ವಿವಾಹಿತ ಮಹಿಳೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲ್ಲೂಕಿನ ಸಮುದ್ರವಳ್ಳಿ ಗ್ರಾಮದಲ್ಲಿ ನಡೆದಿದೆ. ಆಶಾ (35) ಮೃತ ಮಹಿಳೆ.

ಕಂಚನಹಳ್ಳಿ ಗ್ರಾಮದ ಸಚಿನ್ ಎಂಬುವವರೊಂದಿಗೆ ಆಶಾ ಅಕ್ರಮ ಸಂಬಂಧ ಹೊಂದಿದ್ದರು ಎನ್ನಲಾಗಿದ್ದು, ಈ ವಿಚಾರ ತಿಳಿದ ಸಚಿನ್ ಅವರ ಪೋಷಕರು ಆಶಾ ಅವರ ಮನೆಗೆ ಬಂದು ಗಲಾಟೆ ನಡೆಸಿ ನಿಂದನೆ ಹಾಗು ಬೆದರಿಕೆ ಹಾಕಿದ್ದಾರೆಂಬ ಆರೋಪ ಕೇಳಿಬಂದಿದೆ. ಇದೇ ವೇಳೆ ಆಶಾ ಅವರ ಪತಿ ಕೇಶವಮೂರ್ತಿಗೂ ಈ ವಿಚಾರ ತಿಳಿದಿದ್ದು, ಇದರಿಂದ ಮನನೊಂದ ಆಶಾ ಜೂನ್ 1ರಂದು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಸಚಿನ್ ಹಾಗು ಅವರ ಪೋಷಕರು ಸೇರಿ ಒಟ್ಟು ಆರು ಮಂದಿ ವಿರುದ್ಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಶಾ ಅವರ ಕುಟುಂಬಸ್ಥರು ಒತ್ತಾಯಿಸಿದ್ದಾರೆ.

**ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ | ನಗರದಲ್ಲಿ ಜಾಗೃತಿ ಜಾಥಾ**

# ಮಕ್ಕಳ ಹಕ್ಕು ಉಲ್ಲಂಘನೆಯಾಗದಂತೆ ಎಚ್ಚರ ವಹಿಸಿ

• ಪ್ರಜೋದಯ ವರದಿ

**ಹಾಸನ:** ಮಕ್ಕಳ ಹಕ್ಕು ರಕ್ಷಣೆ ಮಾಡುವುದು ಪ್ರತಿ ನಾಗರಿಕರ ಆದ್ಯ ಕರ್ತವ್ಯವಾಗಿದ್ದು, ಸುಂದರ ಬಾಲ್ಯವನ್ನು ಕಸಿದುಕೊಳ್ಳುವ ಅಧಿಕಾರ ಯಾರಿಗೂ ಇಲ್ಲವೆಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ. ದಾಕ್ಷಾಯಿಣಿ ಅವರು ಹೇಳಿದರು.

ಶುಕ್ರವಾರ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಏರ್ಪಡಿಸಿದ್ದ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, 14 ರಿಂದ 18 ವರ್ಷದೊಳಗಿನ ಮಕ್ಕಳನ್ನು ದುಡಿಮೆಗೆ ಬಳಸಿಕೊಳ್ಳಬಹುದಾದರೂ ಕೆಲವು ಷರತ್ತುಗಳನ್ನು ಪಾಲಿಸಬೇಕಾಗುತ್ತದೆ.



ಇತ್ತೀಚಿನ ದಿನಗಳಲ್ಲಿ ಎಸ್ಟೇಟ್, ಚಿತ್ರಮಂದಿರ, ಪೆಟ್ರೋಲ್ ಬಂಕ್, ರೆಸ್ಟೋರೆಂಟ್ ಹಾಗು ಇತರ ಉದ್ಯಮ ಕ್ಷೇತ್ರಗಳಲ್ಲಿ ಬಾಲ ಕಾರ್ಮಿಕರು ಹೆಚ್ಚಾಗಿ ಕಂಡು ಬರುತ್ತಿದ್ದಾರೆ. ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿ ಉಜ್ವಲ ಭವಿಷ್ಯ ನಿರ್ಮಿಸಿ ಕೊಡುವತ್ತ ಎಲ್ಲರೂ ಗಮನ ಹರಿಸಬೇಕಿದೆ ಎಂದರು.

ಬಾಲ ಕಾರ್ಮಿಕರು ಪತ್ತೆಯಾದರೆ ಉಚಿತ ಸಹಾಯವಾಣಿ 1098 ಅಥವಾ ಪೊಲೀಸ್ ಇಲಾಖೆಯ ಸಂಖ್ಯೆ 112 ಇಲ್ಲಿಗೆ ಕರೆ ಮಾಡಿ ದೂರು ಸಲ್ಲಿಸಬಹುದು. ಯಾವುದೇ ಮಗುವನ್ನು ಉದ್ಯೋಗಕ್ಕಾಗಿ ತೊಡಗಿಸಿ ಕೊಂಡರೆ ಉದ್ಯಮಿದಾರರಿಗೆ ಹಾಗು ಪೋಷಕರಿಗೆ ಕಾನೂನಿನ ಮೂಲಕ ಶಿಕ್ಷೆ ಮತ್ತು ದಂಡ ವಿಧಿಸಲಾಗುವುದೆಂದು ಎಚ್ಚರಿಕೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್ ಅವರು ಮಾತನಾಡಿ, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದು ಪೋಷಕರ ಜವಾಬ್ದಾರಿ ಮತ್ತು ಕರ್ತವ್ಯ. ಇಂತಹ ಕಾರ್ಯಕ್ರಮಗಳು ಕೇವಲ


» ನಾಲ್ಕನೇ ಪುಟದಲ್ಲಿ


## ಸಂತೇ ಶಿವರದಲ್ಲಿ 76.5 ಮಿ.ಮೀ. ದಾಖಲೆ ಮಳೆ

• ಪ್ರಜೋದಯ ವರದಿ

**ಹಾಸನ:** ಚನ್ನರಾಯಪಟ್ಟಣ ತಾಲ್ಲೂಕಿನ ಸಂತೇ ಶಿವರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಳೆದ 24 ಗಂಟೆಯಲ್ಲಿ 76.5 ಮಿ.ಮೀ. ಮಳೆ ಸುರಿದು ರಾಜ್ಯದಲ್ಲೇ ಅತ್ಯಧಿಕ ಮಳೆಯಾದ ದಾಖಲೆಯಾಗಿದೆ.

ಚನ್ನರಾಯಪಟ್ಟಣ ತಾಲ್ಲೂಕಿನ ಆನೆಕೆರೆಯಲ್ಲಿ 60.3 ಮಿ.ಮೀ, ನಲ್ಲೂರಿನಲ್ಲಿ 43.4, ಗೌಡಗೆರೆಯಲ್ಲಿ 36.5, ಡಿ.ಕಾಳೇನಹಳ್ಳಿಯಲ್ಲಿ 36.5, ದಿಂಡಗೂರಿನಲ್ಲಿ 30.7, ಅರಸಿಕೆರೆ ತಾಲ್ಲೂಕಿನ ಕರಗುಂದದಲ್ಲಿ 28.5 ಮಿ.ಮೀ ಮಳೆಯಾಗಿದೆ. ಮಧ್ಯಾಹ್ನ 3 ರಿಂದ ಸಂಜೆ 5ರ ವರೆಗೆ ಜೋರು ಮಳೆಯಾಗಿದೆ. ಗಾಳಿ, ಸಿಡಿಲಿನ ಆರ್ಭಟವಿಲ್ಲದೆ ಸುರಿದ ಮಳೆ ಇಳೆಗೆ ತಂಪೆರೆದಿದೆ. ಕೆರೆಕಟ್ಟೆಗಳಿಗೆ ಜೀವಕಳೆ ಬಂದಿದೆ.

ಶಿವಮೊಗ್ಗಾ, ಹಾಸನ, ಕೊಡಗು, ಚಿಕ್ಕಮಗಳೂರು ಮತ್ತು ಮಂಡ್ಯ ಸಹಿತ 5 ಜಿಲ್ಲೆಯ ಕೆಲವು ಕಡೆಗಳಲ್ಲಿ ಚದುರಿದ ರೀತಿಯಲ್ಲಿ ಮಳೆಯಾಗಿದೆ. ಮೈಸೂರು, ತುಮಕೂರು, ಚಾಮರಾಜನಗರ, ಚಿತ್ರದುರ್ಗ, ಬೆಂಗಳೂರು ನಗರ, ವಿಜಯನಗರ, ಕೋಲಾರ, ಬೆಂಗಳೂರು ಗ್ರಾಮಾಂತರ, ರಾಮನಗರ, ಧಾರವಾಡ ಸೇರಿ 16 ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಿದೆ.

# ನಿಮ್ಮ ವೈದ್ಯರನ್ನು ಪ್ರಶ್ನಿಸುವ ಹಕ್ಕು ಚಲಾಯಿಸಿ



ನಿಮ್ಮ ಫ್ಯಾನ್ ಅಥವಾ ಮಿಕ್ಸರ್ ಅಥವಾ ಮೊಬೈಲ್ ಫೋನ್ ಸರಿಯಾಗಿ ಕೆಲಸ ಮಾಡದಿದ್ದರೆ, ಅದನ್ನು ರಿಪೇರಿ ಮಾಡುವವನಿಗೆ ಕೊಟ್ಟು ನೀವು ಈ ಪ್ರಶ್ನೆಗಳನ್ನು ಕೇಳುತ್ತೀರಿ. ಇದಕ್ಕೆ ಏನಾಗಿದೆ? ಯಾವ ಭಾಗ ಕೆಟ್ಟಿದೆ? ರಿಪೇರಿ ಮಾಡಲು ಎಷ್ಟು ಸಮಯ ಬೇಕು? ರಿಪೇರಿಯ ಖರ್ಚು ಎಷ್ಟಾದೀತು?

ನಿಮ್ಮ ಶರೀರದ ವ್ಯವಸ್ಥೆಯಲ್ಲಿ ಏರುಪೇರಾಗಿ ಆರೋಗ್ಯ ಕೆಟ್ಟಾಗ, ಅದರ ರಿಪೇರಿಗೆ ವೈದ್ಯರೊಬ್ಬರ ಸಹಾಯ ಬೇಕಾದಾಗ, ಬಹುಶಃ ನೀವು ಇಂತಹ ಪ್ರಶ್ನೆಗಳನ್ನು ಕೇಳುತ್ತೀರಾ? ತಮ್ಮ ಜೀವವೇ ಆಪತ್ತಿನಲ್ಲಿದ್ದರೂ ವಾಸ್ತವ ತಿಳಿಯುವ ಗೋಜಿಗೆ ಹೋಗುವವರು ವಿರಳ!

ಈ ಪ್ರವೃತ್ತಿ ಗಂಡಾಂತರಕಾರಿ ಎಂಬುದಕ್ಕೆ ಉದಾಹರಣೆ: ಸುಪ್ರಸಿದ್ಧ ವೈದ್ಯರೊಬ್ಬರನ್ನು ಮಹಿಳೆಯೊಬ್ಬಳು ಮತ್ತೆಮತ್ತೆ ಭೇಟಿಯಾದಳು – ತನ್ನ ಸ್ತನದಲ್ಲಿ ಬಿದ್ದಿದ್ದ ಗಂಟಿನ ಪರೀಕ್ಷೆಗಾಗಿ. ಪ್ರತಿ ಬಾರಿಯೂ ಆ ಪರಿಣತ ವೈದ್ಯರು ಇದಕ್ಕೆಲ್ಲ ತಲೆ ಕೆಡಿಸಿಕೊಳ್ಳಬೇಡಿ. ಇದು ತೀರಾ ಸಾಮಾನ್ಯ ಗಂಟು ಇದು ಬೇಗ ಕರಗುತ್ತದೆ ಎಂದು ಆಶ್ವಾಸನೆ ನೀಡಿ ಸಾಗ ಹಾಕಿದರು. ಒಂಭತ್ತು ತಿಂಗಳ ನಂತರ, ಆ ಮಹಿಳೆಗೆ ಸಂಶಯ ಜಾಸ್ತಿಯಾಗಿ, ಆ ಗಂಟಿನ ಜೀವಕೋಶ ಪರೀಕ್ಷೆ ಮಾಡಿಸಿದಳು. ಆಗ ತಿಳಿಯಿತು: ಅದು ಕ್ಯಾನ್ಸರ್ ಗಡ್ಡೆ ಎಂದು! ಆಕೆ ಒಂಭತ್ತು ತಿಂಗಳ ಮುಂಚೆಯೇ ಆ ವೈದ್ಯರನ್ನು ನೇರಾನೇರ ಪ್ರಶ್ನಿಸಿದ್ದರೆ ವೈದ್ಯರ ಜೊತೆ ಮಾತನಾಡಲಾಗದ ರೋಗ

**ನಮ್ಮಲ್ಲಿ ಹಲವರನ್ನು ಬಾಧಿಸುವ**

**ರೋಗ:** ವೈದ್ಯರ ಜೊತೆ ನೇರಾನೇರ ಮಾತನಾಡಲಾಗದ ರೋಗ! ಈ ರೋಗದ ರೋಗ ಲಕ್ಷಣಗಳು ಯಾವುವು? ಈ ಕೆಳಗಿನ **ಯಾವುದೇ ಆತಂಕ ಆಗಿರಬಹುದು:**

1 ) ನಿಮ್ಮ ವೈದ್ಯರು ಹೇಳಿದ ಫೈಬ್ರಾಯ್ಡ್, ಇಡಿಮಾ ಅಥವಾ ಬೇರಾವುದೇ ವೈದ್ಯಕೀಯ ಶಬ್ದದ ಅರ್ಥ ಕೇಳಿದರೆ, ಅವರು ನಿಮ್ಮನ್ನು ದಡ್ಡರೆಂದು ಭಾವಿಸುತ್ತಾರೆ.

2) ನಿಮ್ಮ ರೋಗ ಯಾವುದೆಂದು ನಿಮ್ಮ ವೈದ್ಯರು ಹೇಗೆ ನಿರ್ಧರಿಸಿದರೆಂದು ಕೇಳಿದರೆ, ತನ್ನ ತೀರ್ಮಾನವನ್ನು ಪ್ರಶ್ನಿಸುತ್ತಿದ್ದಾರೆಂದು ವೈದ್ಯರು ಭಾವಿಸುತ್ತಾರೆ.

3) ನಿಮ್ಮ ವೈದ್ಯರು ಸೂಚಿಸಿದ ಔಷಧೋಪಚಾರಗಳ ಅಡ್ಡ-ಪರಿಣಾಮಗಳ ಬಗ್ಗೆ ತಿಳಿಸಿದರೆ, ನಿಮಗೆ ಯಾವುದರಿಂದಲೂ ಸಮಾಧಾನ ಆಗದೆಂದು ವೈದ್ಯರು ಭಾವಿಸುತ್ತಾರೆ.

4) ನೀವು ಇನ್ನೊಬ್ಬ ವೈದ್ಯರಿಂದಲೂ ಸಲಹೆ ಪಡೆಯುತ್ತಿದ್ದೀರಿ ಅಥವಾ ನಿಮ್ಮ ರೋಗ ಯಾವುದೆಂದು ವೈದ್ಯರು ನಿರ್ಧರಿಸಿದ ನಂತರ ನೀವು ಹೋಮಿಯೋಪಥಿ ಅಥವಾ ಆಯುರ್ವೇದ ಚಿಕಿತ್ಸೆ ಪಡೆಯಲು ಇಚ್ಛಿಸುತ್ತೀರಿ ಎಂದು ಅವರಿಗೆ ತಿಳಿಸಿದರೆ, ನಿಮಗೆ ಚಿಕಿತ್ಸೆ ನೀಡಲು ಅವರು ನಿರಾಕರಿಸಬಹುದು.

ಈ ಮೇಲಿನ ನಿಮ್ಮ ಎಲ್ಲಾ ಆತಂಕ ತಪ್ಪಾಗಿರಬಹುದು. ಅವುಗಳಲ್ಲಿ ಯಾವುದೇ ಆತಂಕ ನಿಜವಾಗಿದ್ದರೆ, ಅಂತಹ ವೈದ್ಯರ ಸಲಹೆಯಿಂದ ನಿಮಗೆ ನಿಜಕ್ಕೂ ಪ್ರಯೋಜನ ಇದೆಯೇ? ಎಂದು ಬೇಗನೇ ನಿರ್ಧರಿಸುವುದು ಒಳ್ಳೆಯದು, ಅಲ್ಲವೇ?

**ವೈದ್ಯರು ಪವಾಡ ಪುರುಷರಲ್ಲ:** ವೈದ್ಯರಿಗೆ ವೈದ್ಯವಿಜ್ಞಾನದ ಬಗ್ಗೆ ನಿಮಗಿಂತ ಜಾಸ್ತಿ ತಿಳಿದಿದೆ ಎಂಬುದು ನಿಜ. ವೈದ್ಯರನ್ನು ಪ್ರಶ್ನಿಸುವ ರೋಗಿಗಳು ವಿರಳ ಎಂಬುದೂ ನಿಜ. ಆದರೆ, ಅದಕ್ಕಾಗಿ ನಿಮ್ಮ ವೈದ್ಯರನ್ನು ಪ್ರಶ್ನಿಸದೆ ಇರುವುದು ಸರಿಯಲ್ಲ. ನಿಮ್ಮ ವೈದ್ಯರು ನಮ್ಮ-ನಿಮ್ಮಂತಹ ಸಾಮಾನ್ಯ ಮನುಷ್ಯರೇ ಅಲ್ಲವೇ? ಆದ್ದರಿಂದ ಅವರಿಂದಲೂ ತಪ್ಪುಗಳು ಆಗುವ ಸಂಭವ ಇದೆ.

**ಗಮನಿಸಿ:** ಇತ್ತೀಚೆಗೆ ಸಂಪದದಲ್ಲಿ ನಾನು ಪ್ರಕಟಿಸಿದ ಮೂಕಂ ಕರೋತಿ ವಾಚಾಲಂ ಲೇಖನ (21-5-2026ರಂದು) ಮತ್ತು ನನ್ನರಿವಿನ ನೇಪಥ್ಯದಲ್ಲಿ ಪುಸ್ತಕ ಪರಿಚಯ (22-5-2026ರಂದು) – ಇವುಗಳಲ್ಲಿರುವ ಲೇಖಕರಾದ ಡಾ. ರಾಧಾರಮೇಶ್ ಪ್ರಸ್ತಾಪಿಸಿದ ವೈದ್ಯಕೀಯ ಪ್ರಕರಣಗಳು ಈ ಮಾತಿಗೆ ಪುರಾವೆ.

ವೈದ್ಯರ ಜೊತೆ ನಿಮ್ಮ ಮಾತುಕತೆಯೆಲ್ಲ ನೀವು ಅನಾರೋಗ್ಯದಿಂದ ಮತ್ತು ಆತಂಕದಿಂದ ಬಳಲುತ್ತಿರುವ ಸಮಯದಲ್ಲೇ ನಡೆಯುತ್ತದೆ. ಅಂತಹ ಮನಃಸ್ಥಿತಿಯಲ್ಲಿ ನೀವು ಅವರನ್ನು ಪವಾಡ ಪುರುಷರೆಂದು ಭಾವಿಸಿ, ಅವರು ನಿಮ್ಮ ಕಾಯಿಲೆಯನ್ನು ಖಂಡಿತವಾಗಿ ಗುಣ ಪಡಿಸುತ್ತಾರೆಂದು ನಂಬುವ ಸಾಧ್ಯತೆಗಳಿವೆ.

ನಿಮ್ಮ ವೈದ್ಯರ ಮೇಲೆ ನಂಬಿಕೆ ಅಗತ್ಯ. ಆದರೆ ಅವರನ್ನು ಪವಾಡ ಪುರುಷರೆಂದು ಆರಾಧಿಸುವ ಪ್ರವೃತ್ತಿ ಸರಿಯಲ್ಲ. ನಿಮ್ಮ ವೈದ್ಯರಿಗೆ ಎಲ್ಲ ಗೊತ್ತಿದೆ ಎಂಬ ನಿಮ್ಮ ಧೋರಣೆಯಂತೂ ಅಪಾಯಕ್ಕೆ ಆಹ್ವಾನ. ಹಾಗಾಗಿ ನೆನಪಿರಲಿ: ಪ್ರತಿಯೊಬ್ಬ ರೋಗಿಗೆ ವೈದ್ಯರನ್ನು ಪ್ರಶ್ನಿಸುವ ಹಕ್ಕು ಇದೆ ಮತ್ತು ತನ್ನನ್ನು ಬಾಧಿಸುತ್ತಿರುವ ರೋಗದ ಬಗ್ಗೆ ವಿವರವಾಗಿ ತಿಳಿದುಕೊಳ್ಳುವ ಹಕ್ಕು ಇದೆ.

**ವೈದ್ಯರ ಜೊತೆ ಮಾತಾಡಲು ಸೂತ್ರಗಳು**

ನಿಮ್ಮ ವೈದ್ಯರ ಜೊತೆ ಯಾವ ವಿಷಯದ ಬಗ್ಗೆ, ಯಾವಾಗ ಮತ್ತು ಹೇಗೆ ಮಾತಾಡಬೇಕು ಎಂದು ಕಲಿತು ಕೊಂಡರೆ, ನಿಮ್ಮ ಚಿಕಿತ್ಸೆಯ ಗುಣಮಟ್ಟವನ್ನು ನೀವು ಉತ್ತಮಪಡಿಸಿಕೊಳ್ಳಬಹುದು.

**ವೈದ್ಯರನ್ನು ಭೇಟಿ ಆಗುವ ಮುನ್ನ ಮಾಡಬೇಕಾದ್ದು:**

– ನಿಮ್ಮ ರೋಗಲಕ್ಷಣಗಳು ಯಾವ ಕ್ರಮದಲ್ಲಿ ದೇಹದಲ್ಲಿ ಮೂಡಿ ಬಂದವೋ ಅದೇ ಕ್ರಮದಲ್ಲಿ ಅವನ್ನು ಬರೆಯಿರಿ.

– ನೀವು ಕಳೆದ ಒಂದು ವರುಷದ ಅವಧಿಯಲ್ಲಿ ಯಾವುದೇ ವೈದ್ಯಕೀಯ ತಪಾಸಣೆ ಮಾಡಿಸಿಕೊಂಡಿದ್ದರೆ, ಅದರ ಎಲ್ಲ ವರದಿಗಳನ್ನು ವೈದ್ಯರಿಗೆ ತೋರಿಸಲಿಕ್ಕಾಗಿ ತೆಗೆದಿಟ್ಟುಕೊಳ್ಳಿ.

– ನಿಮಗೆ ಜ್ವರ ಬರುತ್ತಿದ್ದರೆ, ಉಷ್ಣತಾಮಾಪಕದಿಂದ ಶರೀರದ ಉಷ್ಣತೆಯನ್ನು ಗಂಟೆಗೊಮ್ಮೆ ಅಳೆದು, ಬರೆದಿಟ್ಟುಕೊಳ್ಳಿ.

**ವೈದ್ಯರನ್ನು ಭೇಟಿಯಾದಾಗ:**

★ ನಿಮ್ಮ ಮತ್ತು ನಿಮ್ಮ ಕುಟುಂಬದ ವೈದ್ಯಕೀಯ ಚರಿತ್ರೆ, ಬಹಿರಂಗಪಡಿಸಲು ನಾಚಿಕೆಯಾಗುವಂತಹ ನಿಮ್ಮ ರೋಗಗಳು, ನೀವು ಸೇವಿಸುವ ನಿಷಿದ್ಧ ವಸ್ತುಗಳು (ಶಕ್ತಿವರ್ಧಕಗಳು, ಮದ್ಯಪಾನ, ಧೂಮಪಾನ, ಮಾದಕವಸ್ತುಗಳು) ವಿವೇಚನಾರಹಿತವಾಗಿ ಬಳಸುವ ಔಷಧಿಗಳು – ಇವುಗಳ ಬಗ್ಗೆ ವೈದ್ಯರಿಗೆ ಪೂರ್ಣ ವಿವರ ನೀಡಿರಿ.

★ ವೈದ್ಯರ ಬಳಿ ಮುಚ್ಚುಮರೆ ಮಾಡಬೇಡಿ. ನಿಮಗೆ ನಿದ್ದೆ ಬರಲು ತೊಂದರೆ ಆಗುತ್ತಿದ್ದರೆ, ನೀವು ತೀವ್ರ ದುಃಖ ಅಥವಾ ಮಾನಸಿಕ ಒತ್ತಡದಿಂದ ಬಳಲುತ್ತಿದ್ದರೆ – ಎಲ್ಲವನ್ನೂ ವೈದ್ಯರಿಗೆ ತಿಳಿಸಿ. ಚಿಕಿತ್ಸೆಗಾಗಿ ಬರುವ ರೋಗಿಗಳ ಹಲವು ದೈಹಿಕ ಸಮಸ್ಯೆಗಳಿಗೆ ಮಾನಸಿಕ ಒತ್ತಡದ ಹಿನ್ನೆಲೆ ಇರುತ್ತದೆ.

★ ವೈದ್ಯರು ಹೇಳಿದ ವಿಷಯಗಳು ಮತ್ತು ಚಿಕಿತ್ಸೆಯ ವಿವರಗಳು ನಿಮಗೆ ಸ್ಪಷ್ಟವಾಗಿ ಅರ್ಥವಾಗಿದೆ ಎಂಬುದನ್ನು ಖಚಿತ ಪಡಿಸಿಕೊಳ್ಳಿರಿ. ನಿಮ್ಮ ಸಮಸ್ಯೆ ಏನು ಹಾಗೂ ಅದರ ಪರಿಹಾರಕ್ಕಾಗಿ ನೀವು ಮಾಡಬೇಕಾದ್ದೇನು – ಇದನ್ನು ವೈದ್ಯರೆದುರೇ ಬರೆದುಕೊಳ್ಳುವುದು ಅತ್ಯುತ್ತಮ.

★ ವೈದ್ಯರು ಸೂಚಿಸಿದ ಔಷಧಿಗೆ ಅಡ್ಡ-ಪರಿಣಾಮಗಳು ಇವೆಯೇ ಎಂದು ಪ್ರಶ್ನಿಸಿರಿ. ಅಂತಹ ಸಂದರ್ಭದಲ್ಲಿ ಏನು ಮಾಡಬೇಕೆಂದು ಕೇಳಿ ತಿಳಿದುಕೊಳ್ಳಿರಿ. (ವೈದ್ಯರು ಸೂಚಿಸಿದ ಔಷಧಿಯಿಂದಾಗಿ ಅಡ್ಡ-ಪರಿಣಾಮಗಳು ಉಂಟಾದರೆ ತಕ್ಷಣವೇ ವೈದ್ಯರಿಗೆ ತಿಳಿಸಿ. ಈಗಂತೂ ಮೊಬೈಲ್ ಫೋನಿನಲ್ಲಿ ತಿಳಿಸಬಹುದು.)

**ಇನ್ನೊಬ್ಬ ಪರಿಣತ ವೈದ್ಯರ ಅಭಿಪ್ರಾಯ ಯಾವಾಗ ಪಡೆಯಬಹುದು?**

ಬಳಕೆದಾರರ ರಕ್ಷಣಾ ಕಾಯಿದೆ ಅನುಸಾರ, ವೈದ್ಯರ ಸೇವೆ ಪಡೆಯುವ ಪ್ರತಿಯೊಬ್ಬರೂ ವೈದ್ಯಕೀಯ ಸೇವೆಯ ಬಳಕೆದಾರರು. ಆದ್ದರಿಂದ ನಿಮಗೆ ಸುರಕ್ಷಿತ ಸೇವೆ ಪಡೆಯುವ ಹಕ್ಕು ಇದೆ. ಈ ಕೆಳಗೆ ಸೂಚಿಸಿದ ಸಂದರ್ಭಗಳಲ್ಲಿ, ನೀವು ಇನ್ನೊಬ್ಬ ಪರಿಣತ ವೈದ್ಯರ ಅಭಿಪ್ರಾಯ ಪಡೆಯಬಹುದು:

1. ಮೂರು ಪರೀಕ್ಷಾ ಸಂದರ್ಶನಗಳ ನಂತರವೂ ರೋಗ ಲಕ್ಷಣಗಳು ಹಾಗೇ ಇದ್ದು, ನಿಮ್ಮ ವೈದ್ಯರಿಗೆ ರೋಗ ಪತ್ತೆ ಮಾಡಲಾಗದಿದ್ದಲ್ಲಿ.

2. ನಿಮಗೆ ಕ್ಯಾನ್ಸರಿನಂತಹ ಗಂಭೀರ, ತೀವ್ರ ಮತ್ತು ಪ್ರಾಣಾಂತಿಕ ರೋಗವಿದೆ ಎಂದು ನಿಮ್ಮ ವೈದ್ಯರು ಹೇಳಿದಾಗ.

3. ವೈದ್ಯರು ಗುರುತಿಸಿದ ನಿಮ್ಮ ರೋಗ ಅಪರೂಪದ ರೋಗ ಎಂದು ತಿಳಿಸಿದಾಗ.

4. ನಿಮ್ಮ ರೋಗಕ್ಕೆ ಮಾನಸಿಕ ಕಾರಣವಿದೆ ಎಂದು ವೈದ್ಯರು ಹೇಳಿದಾಗ.

5. ನಿಮಗೆ ಶಸ್ತ್ರಕ್ರಿಯೆ ಮಾಡಬೇಕೆಂದು ವೈದ್ಯರು ಸೂಚಿಸಿದಾಗ.

ವೈದ್ಯರು ಶಸ್ತ್ರಕ್ರಿಯೆ ಅಗತ್ಯ ಎಂದಾಗ ಏನು ಮಾಡಬೇಕು?

1) ಶಸ್ತ್ರಕ್ರಿಯೆಯ ಮುನ್ನ ಇತರ ಯಾವ ಚಿಕಿತ್ಸೆಗಳನ್ನು ಪ್ರಯತ್ನಿಸಬಹುದೆಂದು ಕೇಳಿರಿ.

2) ಸದ್ಯಕ್ಕೆ ಶಸ್ತ್ರಕ್ರಿಯೆ ಮಾಡದಿದ್ದರೆ ಏನಾದೀತೆಂದು ಕೇಳಿರಿ.

3) ಶಸ್ತ್ರಕ್ರಿಯೆಯಿಂದಾಗುವ ಅನುಕೂಲಗಳು ಯಾವ್ಯಾವು ಎಂದು ಕೇಳಿರಿ.

4) ಶಸ್ತ್ರಕ್ರಿಯೆಯ ಅಪಾಯಸಂಭವ (ರಿಸ್ಕ್) ಬಗ್ಗೆ ಕೇಳಿರಿ. ಅದರಿಂದಾಗುವ ತೊಡಕುಗಳು ಮತ್ತು ಮರಣ ಪ್ರಮಾಣ ಬಗ್ಗೆ ನಿರ್ದಿಷ್ಟವಾಗಿ ಕೇಳಿರಿ. (ಅಂತಹ ಪ್ರತೀ 100 ಶಸ್ತ್ರಚಿಕಿತ್ಸೆಯ ನಂತರ, ವೈದ್ಯವಿಜ್ಞಾನದ ದಾಖಲೆಗಳ ಪ್ರಕಾರ ಬದುಕಿ ಉಳಿಯುವ ರೋಗಿಗಳ ಸಂಖ್ಯೆ ಎಷ್ಟು?)

ಒಬ್ಬ ವೈದ್ಯರು ಶಸ್ತ್ರಕ್ರಿಯೆ ಆಗಲೇಬೇಕು ಎಂದಾಗ, ಇನ್ನೊಬ್ಬ ವೈದ್ಯರು ಆ ರೋಗಿಯನ್ನು ಔಷಧಿಗಳು, ಪಥ್ಯ, ವ್ಯಾಯಾಮ ಮತ್ತು/ ಅಥವಾ ವಿಶ್ರಾಂತಿಯಿಂದ ಗುಣ ಪಡಿಸಿದ ಸಾವಿರಾರು ಪ್ರಕರಣಗಳಿವೆ. ಆದ್ದರಿಂದ, ಬದಲಿ ಚಿಕಿತ್ಸೆಗಳ ಬಗ್ಗೆ ವಿವರವಾಗಿ ಮಾಹಿತಿ ಸಂಗ್ರಹಿಸಿ, ಅನಂತರ ಶಸ್ತ್ರಚಿಕಿತ್ಸೆಯ ಬಗ್ಗೆ ನಿರ್ಧರಿಸುವುದು ಅತ್ಯುತ್ತಮ.

ಕೊನೆಗೊಂದು ಮಾತು: ವೈದ್ಯರನ್ನು ಪ್ರಶ್ನಿಸುವ ನಿಮ್ಮ ಹಕ್ಕು ಚಲಾಯಿಸಿ, ಮುಂದೆ ಪಶ್ಚಾತ್ತಾಪ ಪಡೋದನ್ನು ತಪ್ಪಿಸಿಕೊಳ್ಳಿರಿ.

– **ಅಡ್ಡೂರು** ಕೃಷ್ಣರಾವ್



# ಚಿಟ್ಟೆಗಳ ಬಣ್ಣದ ಪೋಷಾಕು

ಬೆಳಗಾವಿ ಜಿಲ್ಲೆಯ ಬಹುತೇಕ ಅರಣ್ಯ ಪ್ರದೇಶ ಖಾನಾಪೂರ ತಾಲೂಕಿನ ವ್ಯಾಪ್ತಿಯಲ್ಲಿ ಹರಡಿಕೊಂಡಿದೆ. ಪಶ್ಚಿಮಘಟ್ಟದ ಮಡಿಲಿನಲ್ಲಿ ನೆಲೆಸಿರುವ ಈ ಸುಂದರ ನಿತ್ಯಹರಿದ್ವರ್ಣ ಕಾಡು ಜೀವವೈವಿಧ್ಯದ ಅಪರೂಪದ ನಿಧಿಯಾಗಿದೆ. ತೇಗ, ಹಲಸು, ನೇರಳೆ ಸೇರಿದಂತೆ ನೂರಾರು ಸಸ್ಯ ಪ್ರಭೇದಗಳು ಇಲ್ಲಿ ಹಸಿರಿನ ಹೊದಿಕೆಯನ್ನು ಹರಡಿವೆ. ಕರಡಿ, ಕಾಡುಕೋಣ, ಚಿರತೆ, ಜಿಂಕೆ ಮೊದಲಾದ ಪ್ರಾಣಿಗಳಿಂದ ಸಮೃದ್ಧವಾಗಿರುವ ಈ ಕಾಡು, ಪ್ರಕೃತಿಯ ಅದ್ಭುತ ವೈಭವವನ್ನು ಸಾರುತ್ತದೆ. ಅರಣ್ಯದ ಪರಿಸರ ಸಮತೋಲನವನ್ನು ಕಾಪಾಡುವಲ್ಲಿ ಸೂಕ್ಷ್ಮಜೀವಿಗಳು, ಕೀಟಗಳು ಹಾಗೂ ಚಿಟ್ಟೆಗಳ ಪಾತ್ರ ಮಹತ್ವದ್ದಾಗಿದೆ. ಬೆಟ್ಟ-ಗುಡ್ಡಗಳ ನಡುವೆ ಹರಿಯುವ ನದಿಗಳು, ಝುರಿಗಳು ಮತ್ತು ಜಲಪಾತಗಳು ಈ ಕಾಡಿನ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸುತ್ತವೆ. ಹಸಿರು ನೆಲದ ಮೇಲೆ ಅರಳಿರುವ ಬಿಳಿ ಹೂಗಳು ಹಿಮದ ಹೊದಿಕೆಯಂತೆ ಕಾಣಿಸಿದರೆ, ಗುಲಾಬಿ ಮತ್ತು ಹಳದಿ ಬಣ್ಣದ ಕಾಡುಹೂಗಳು ಪ್ರಕೃತಿಯೇ ಬಿಡಿಸಿದ ರಂಗೋಲಿಯಂತೆ ಕಂಗೊಳಿಸುತ್ತವೆ.

ಈ ಹೂಗಳ ಸುತ್ತ ಮುತ್ತ ಹಾರಾಡುವ ಬಣ್ಣ ಬಣ್ಣದ ಚಿಟ್ಟೆಗಳು ಪ್ರಕೃತಿಯ ಚಲಿಸುವ ಚಿತ್ರಗಳಂತೆ ಕಾಣುತ್ತವೆ. ಅವುಗಳ ರೆಕ್ಕೆಗಳ ಮೇಲಿನ ಬಣ್ಣಗಳ ವೈವಿಧ್ಯತೆ ನೋಡುಗರ ಮನಸೆಳೆಯುತ್ತದೆ. ಗಿಡದಿಂದ ಗಿಡಕ್ಕೆ ಹಾರುತ್ತಾ, ಹೂವಿನಿಂದ ಹೂವಿಗೆ ಮಕರಂದ ಹೀರುತ್ತಾ ಅವುಗಳು ಬಣ್ಣಗಳ ಹಬ್ಬವನ್ನೇ ಸೃಷ್ಟಿಸುತ್ತವೆ. ಹೆಮ್ಮಡಗಾ ಪ್ರದೇಶವು ದಟ್ಟ ಅರಣ್ಯದಿಂದ ಕೂಡಿದ್ದು, ಇಲ್ಲಿನ ಬಾವಲಿ ಗುಹೆ ಪ್ರಕೃತಿ ಪ್ರಿಯರನ್ನು ಆಕರ್ಷಿಸುತ್ತದೆ. ಸಾಮಾನ್ಯವಾಗಿ ನಾವು ಒಂದೆರಡು ವಿಧದ ಚಿಟ್ಟೆಗಳನ್ನು ಮಾತ್ರ ಕಾಣುತ್ತೇವೆ. ಆದರೆ ಇಲ್ಲಿ ನೂರಾರು ಜಾತಿಯ ಚಿಟ್ಟೆಗಳು ಕಂಡುಬರುತ್ತವೆ. ಕಾಮನ್ ಜೆಜಬೆಲ್, ಕಾಮನ್ ಟೈಗರ್, ಪೀಕಾಕ್ ಪ್ಯಾನ್ಸಿ, ಸ್ಮಾಲ್ ಗ್ರಾಸ್ ಯೆಲ್ಲೋ ಮುಂತಾದ ಚಿಟ್ಟೆಗಳು ಬಣ್ಣಬಣ್ಣದ ವಸ್ತ್ರಗಳನ್ನು ಧರಿಸಿದ ಮಾದರಿಗಳಂತೆ ಕಾಣುತ್ತವೆ. ಗಿಡದಿಂದ ಗಿಡಕ್ಕೆ ಹಾರುತ್ತಾ ಅವುಗಳು ಪ್ರಕೃತಿಯ ಮಧ್ಯೆ ಪ್ಯಾಷನ್ ಶೋ ನಡೆಸುವಂತೆ ಭಾಸವಾಗುತ್ತದೆ. ಈ ಜೀವವೈವಿಧ್ಯದ ಕಾಡಿನಲ್ಲಿ ವಿವಿಧ ಜಾತಿಯ ಹಾವುಗಳು, ಕಪ್ಪೆಗಳು ಹಾಗೂ ಅನೇಕ ಕೀಟಗಳು ವಾಸಿಸುತ್ತವೆ. ಎತ್ತರದ ಬೆಟ್ಟಗಳಿಂದ ಧುಮ್ಮಿಕ್ಕುವ ಜಲಪಾತಗಳ ನಿನಾದ ಸಂಗೀತದಂತೆ ಕಿವಿಗೆ ಇಂಪು ನೀಡುತ್ತದೆ. ಬೆಟ್ಟದ ತುದಿಯಲ್ಲಿ ನಿಂತು ಕೆಳಗೆ ಹರಡಿರುವ ಹಸಿರು ಸಮುದ್ರವನ್ನು ನೋಡಿದಾಗ ಮನಸ್ಸು ಉಲ್ಲಾಸದಿಂದ ತುಂಬಿ ಹೋಗುತ್ತದೆ. ಪ್ರಕೃತಿಯ ಈ ಅದ್ಭುತ ಸೃಷ್ಟಿಯಲ್ಲಿ ಪ್ರತಿಯೊಂದು ಜೀವಿಯೂ ತನ್ನದೇ ಆದ ಕೊಡುಗೆಯನ್ನು ನೀಡುತ್ತಾ ಪರಿಸರದ ಸಮತೋಲನವನ್ನು ಕಾಪಾಡುತ್ತಿದೆ. ಮಾನವನ ಬದುಕನ್ನು ಸಮೃದ್ಧಗೊಳಿಸುವ ಇಂತಹ ಅರಣ್ಯಗಳಿಗೆ ನಾವು ಎಷ್ಟೇ ಕೃತಜ್ಞತೆ ಸಲ್ಲಿಸಿದರೂ ಅದು ಕಡಿಮೆಯೇ. ಕಾಡು, ಚಿಟ್ಟೆಗಳು, ಹೂವುಗಳು ಮತ್ತು ಜಲಪಾತಗಳ ಈ ನೈಸರ್ಗಿಕ ಲೋಕ ನಮಗೆ ಪರಿಸರ ಸಂರಕ್ಷಣೆಯ ಮಹತ್ವವನ್ನು ಪ್ರತಿಕ್ಷಣವೂ ನೆನಪಿಸುತ್ತಿರುತ್ತದೆ.

– **ವಿನೋದ ರಾ. ಪಾಟೀಲ,** ಚಿಕ್ಕಬಾಗೇವಾಡಿ

# ತನ್ನೊಳಗಿನ ತಾನು ಎಚ್ಚೆತ್ತುಕೊಂಡಾಗ

ಮನುಷ್ಯನ ಜೀವನದಲ್ಲಿ ಅನೇಕ ಸಂದರ್ಭಗಳು ಬರುತ್ತವೆ. ಕೆಲವು ಸಂದರ್ಭಗಳು ಅವನನ್ನು ಸಂತೋಷದ ಶಿಖರಕ್ಕೆ ಕೊಂಡೊಯ್ಯುತ್ತವೆ. ಇನ್ನೂ ಕೆಲವು ಸಂದರ್ಭಗಳು ದುಃಖದ ಆಳಕ್ಕೆ ತಳ್ಳುತ್ತವೆ. ಆದರೆ ಈ ಎಲ್ಲ ಅನುಭವಗಳ ಮಧ್ಯೆ ಒಂದು ಮಹತ್ತರವಾದ ಕ್ಷಣವಿದೆ. ಅದು ತನ್ನೊಳಗಿನ ತಾನು ಎಚ್ಚೆತ್ತುಕೊಳ್ಳುವ ಕ್ಷಣ. ಈ ಎಚ್ಚರಿಕೆ ಹೊರಗಿನಿಂದ ಬರುವುದಿಲ್ಲ. ಅದು ಯಾರ ಉಪದೇಶದಿಂದಲೂ ಸಂಪೂರ್ಣವಾಗಿ ಮೂಡುವುದಿಲ್ಲ. ಅದು ವ್ಯಕ್ತಿಯ ಅಂತರಾಳದಲ್ಲಿ ಹುಟ್ಟುವ ಆತ್ಮಜ್ಞಾನ. ಆ ಕ್ಷಣ ಬಂದಾಗ ಜೀವನದ ಅರ್ಥವೇ ಬದಲಾಗುತ್ತದೆ.


ನಾವು ಬಹುಸಾರಿ ನಮ್ಮ ಜೀವನವನ್ನು ಇತರರ ನಿರೀಕ್ಷೆಗಳ ಆಧಾರದ ಮೇಲೆ ನಡೆಸುತ್ತೇವೆ. ಸಮಾಜ ಏನು ಹೇಳುತ್ತದೆ, ಜನರು ಏನು ಯೋಚಿಸುತ್ತಾರೆ, ನಮ್ಮ ಸಾಧನೆಗಳನ್ನು ಯಾರು ಹೇಗೆ ಅಳೆಯುತ್ತಾರೆ ಎಂಬ ಚಿಂತೆಯಲ್ಲೇ ಬದುಕುತ್ತೇವೆ. ಈ ಓಟದಲ್ಲಿ ನಾವು ನಮ್ಮನ್ನು ನಾವು ಮರೆತುಬಿಡುತ್ತೇವೆ. ನಮ್ಮ ಕನಸುಗಳು, ನಮ್ಮ ಆಸಕ್ತಿಗಳು, ನಮ್ಮ ನಿಜವಾದ ಸಾಮರ್ಥ್ಯಗಳು ಎಲ್ಲೋ ಕಣ್ಮರೆಯಾಗುತ್ತವೆ. ಆದರೆ ಒಂದು ದಿನ ಜೀವನದ ಯಾವುದೋ ತಿರುವಿನಲ್ಲಿ ನಾವು ನಮ್ಮೊಳಗೆ ಒಂದು ಪ್ರಶ್ನೆಯನ್ನು ಕೇಳಿಕೊಳ್ಳುತ್ತೇವೆ ನಾನು ನಿಜವಾಗಿಯೂ ಯಾರು? ಇದೇ ಪ್ರಶ್ನೆ ತನ್ನೊಳಗಿನ ತಾನನ್ನು ಎಚ್ಚರಗೊಳಿಸುವ ಮೊದಲ ಹೆಜ್ಜೆಯಾಗುತ್ತದೆ.

ತನ್ನೊಳಗಿನ ತಾನು ಎಚ್ಚೆತ್ತುಕೊಂಡಾಗ ಮನುಷ್ಯ ತನ್ನ ಶಕ್ತಿಯನ್ನು ಅರಿಯಲು ಪ್ರಾರಂಭಿಸುತ್ತಾನೆ. ಇದುವರೆಗೆ ತಾನು ಅಸಾಧ್ಯವೆಂದು ಭಾವಿಸಿದ್ದ ಅನೇಕ ಕೆಲಸಗಳು ಸಾಧ್ಯವೆಂದು ಕಾಣುತ್ತವೆ. ತನ್ನ ದುರ್ಬಲತೆಗಳನ್ನು ಆತ ಒಪ್ಪಿಕೊಳ್ಳುತ್ತಾನೆ. ಜೊತೆಗೆ ತನ್ನ ಸಾಮರ್ಥ್ಯಗಳನ್ನು ಗುರುತಿಸುತ್ತಾನೆ. ಆತ ತನ್ನನ್ನು ಇತರರೊಂದಿಗೆ ಹೋಲಿಕೆ ಮಾಡುವುದನ್ನು ಬಿಟ್ಟು ತನ್ನದೇ ಆದ ಪಯಣವನ್ನು ಪ್ರಾರಂಭಿಸುತ್ತಾನೆ. ಈ ಅರಿವು ವ್ಯಕ್ತಿಯ ಜೀವನದಲ್ಲಿ ಆತ್ಮವಿಶ್ವಾಸದ ಬೆಳಕನ್ನು ಹಚ್ಚುತ್ತದೆ.

ಜೀವನದಲ್ಲಿ ಎದುರಾಗುವ ಸೋಲುಗಳು ಹಲವರನ್ನು ಕುಗ್ಗಿಸುತ್ತವೆ. ಆದರೆ ತನ್ನೊಳಗಿನ ತಾನು ಎಚ್ಚೆತ್ತುಕೊಂಡ ವ್ಯಕ್ತಿಗೆ ಸೋಲುಗಳು ಪಾಠಗಳಾಗಿ ಕಾಣುತ್ತವೆ. ಆತ ಸೋಲನ್ನು ಅಂತ್ಯವೆಂದು ಭಾವಿಸುವುದಿಲ್ಲ. ಬದಲಾಗಿ ಅದನ್ನು ಹೊಸ ಆರಂಭದ ಅವಕಾಶವೆಂದು ಸ್ವೀಕರಿಸುತ್ತಾನೆ. ಏಕೆಂದರೆ ಅವನಿಗೆ ತಿಳಿದಿರುತ್ತದೆ ಹೊರಗಿನ ಪರಿಸ್ಥಿತಿಗಳು ಎಷ್ಟೇ ಕಠಿಣವಾಗಿದ್ದರೂ ತನ್ನೊಳಗಿನ ಶಕ್ತಿ ಇನ್ನೂ ಜೀವಂತವಾಗಿದೆ ಎಂದು.

ತನ್ನೊಳಗಿನ ತಾನು ಎಚ್ಚೆತ್ತುಕೊಂಡಾಗ ಮನುಷ್ಯನ ದೃಷ್ಟಿಕೋನವೂ ಬದಲಾಗುತ್ತದೆ. ಹಿಂದೆ ಸಮಸ್ಯೆಗಳಂತೆ ಕಂಡಿದ್ದ ಸಂಗತಿಗಳು ಈಗ ಸವಾಲುಗಳಾಗಿ ಕಾಣುತ್ತವೆ. ಹಿಂದೆ ಅಸಹನೆಯಿಂದ ಪ್ರತಿಕ್ರಿಯಿಸುತ್ತಿದ್ದ ವ್ಯಕ್ತಿ ಈಗ ಸಮಾಧಾನದಿಂದ ಯೋಚಿಸಲು ಪ್ರಾರಂಭಿಸುತ್ತಾನೆ. ಅವನಲ್ಲಿ ಸಹಾನುಭೂತಿ ಹೆಚ್ಚಾಗುತ್ತದೆ. ಇತರರ ನೋವನ್ನು ಅರ್ಥಮಾಡಿಕೊಳ್ಳುವ ಗುಣ ಬೆಳೆಯುತ್ತದೆ. ಏಕೆಂದರೆ ತನ್ನನ್ನು ಅರಿತವನು ಇತರರ ಮನಸ್ಸನ್ನೂ ಸುಲಭವಾಗಿ ಅರಿಯಬಲ್ಲನು.

ಇಂದಿನ ಜಗತ್ತಿನಲ್ಲಿ ಹೆಚ್ಚಿನ ಜನರು ಹೊರಗಿನ ಯಶಸ್ಸಿನ




ಬೆನ್ನಟ್ಟುತ್ತಿದ್ದಾರೆ. ಹಣ, ಹುದ್ದೆ, ಖ್ಯಾತಿ ಮತ್ತು ಅಧಿಕಾರವನ್ನು ಜೀವನದ ಪರಮ ಗುರಿಯೆಂದು ಭಾವಿಸುತ್ತಿದ್ದಾರೆ. ಆದರೆ ಇವೆಲ್ಲವೂ ಇದ್ದರೂ ಮನಸ್ಸಿನಲ್ಲಿ ಶಾಂತಿ ಇಲ್ಲದಿದ್ದರೆ ಬದುಕು ಅಪೂರ್ಣವಾಗಿಯೇ ಉಳಿಯುತ್ತದೆ. ತನ್ನೊಳಗಿನ ತಾನು ಎಚ್ಚೆತ್ತುಕೊಂಡಾಗ ವ್ಯಕ್ತಿಗೆ ಈ ಸತ್ಯ ಅರಿವಾಗುತ್ತದೆ. ಆತ ಹೊರಗಿನ ಸಾಧನೆಗಳಿಗಿಂತ ಒಳಗಿನ ಸಂತೋಷಕ್ಕೆ ಹೆಚ್ಚಿನ ಮಹತ್ವ ನೀಡುತ್ತಾನೆ. ಇದೇ ನಿಜವಾದ ಯಶಸ್ಸಿನ ಆರಂಭ.

ಆತ್ಮಜ್ಞಾನವು ಕೇವಲ ತತ್ವಶಾಸ್ತ್ರದ ವಿಷಯವಲ್ಲ. ಅದು ಬದುಕಿನ ಮಾರ್ಗದರ್ಶಕ. ತನ್ನೊಳಗಿನ ತಾನು ಎಚ್ಚೆತ್ತುಕೊಂಡಾಗ ವ್ಯಕ್ತಿ ತನ್ನ ಜೀವನದ ಜವಾಬ್ದಾರಿಯನ್ನು ಸ್ವತಃ ಹೊತ್ತುಕೊಳ್ಳುತ್ತಾನೆ. ತನ್ನ ತಪ್ಪುಗಳಿಗೆ ಇತರರನ್ನು ದೂಷಿಸುವುದನ್ನು ನಿಲ್ಲಿಸುತ್ತಾನೆ. ತನ್ನ ಬೆಳವಣಿಗೆಗೆ ತಾನೇ ಕಾರಣನಾಗುತ್ತಾನೆ. ಈ ಮನೋಭಾವ ಅವನನ್ನು ಹೆಚ್ಚು ಪ್ರಬುದ್ಧನನ್ನಾಗಿ ಮಾಡುತ್ತದೆ.

ಪ್ರಕೃತಿಯನ್ನು ಗಮನಿಸಿದರೆ ಈ ಸತ್ಯ ಇನ್ನಷ್ಟು ಸ್ಪಷ್ಟವಾಗುತ್ತದೆ. ಬೀಜವು ಮಣ್ಣಿನೊಳಗೆ ಮೌನವಾಗಿ ಮಲಗಿರುತ್ತದೆ. ಆದರೆ ಸರಿಯಾದ ಸಮಯ ಬಂದಾಗ ಅದು ಮೊಳಕೆಯೊಡೆಯುತ್ತದೆ. ಆ ಚಿಕ್ಕ ಮೊಳಕೆ ದೊಡ್ಡ ಮರವಾಗಿ ಬೆಳೆಯುತ್ತದೆ. ಅದೇ ರೀತಿ ಪ್ರತಿಯೊಬ್ಬ ಮನುಷ್ಯನೊಳಗೂ ಅಪಾರವಾದ ಶಕ್ತಿ ಅಡಗಿದೆ. ಆ ಶಕ್ತಿ ಎಚ್ಚೆತ್ತುಕೊಳ್ಳುವವರೆಗೆ ಜೀವನ ಸಾಮಾನ್ಯವಾಗಿ ಕಾಣಬಹುದು. ಆದರೆ ಒಮ್ಮೆ ಅದು ಜಾಗೃತವಾದರೆ ವ್ಯಕ್ತಿ ತನ್ನ ಜೀವನವನ್ನಷ್ಟೇ ಅಲ್ಲ, ಇತರರ ಬದುಕನ್ನೂ ಬೆಳಗಬಲ್ಲನು.

ಇತಿಹಾಸದಲ್ಲಿ ಮಹಾನ್ ವ್ಯಕ್ತಿಗಳ ಬದುಕನ್ನು ನೋಡಿದಾಗ ಈ ಸತ್ಯ ಗೋಚರಿಸುತ್ತದೆ. ಅವರು ಸಾಮಾನ್ಯ ಮನುಷ್ಯರೇ ಆಗಿದ್ದರು. ಆದರೆ ತಮ್ಮೊಳಗಿನ ಶಕ್ತಿಯನ್ನು ಅರಿತುಕೊಂಡರು. ತಮ್ಮ ಕನಸುಗಳ ಮೇಲೆ ನಂಬಿಕೆ ಇಟ್ಟರು. ಅಡೆತಡೆಗಳನ್ನು ಎದುರಿಸಿದರು. ಅದರಿಂದಲೇ ಅವರು ಸಮಾಜಕ್ಕೆ ದಾರಿದೀಪರಾದರು. ಅವರ ಮಹತ್ವವು ಹೊರಗಿನ ಸಾಧನೆಗಳಲ್ಲಿ ಮಾತ್ರವಲ್ಲ; ತಮ್ಮೊಳಗಿನ ತಾನನ್ನು ಕಂಡುಕೊಂಡ ಧೈರ್ಯದಲ್ಲಿತ್ತು.

ತನ್ನೊಳಗಿನ ತಾನು ಎಚ್ಚೆತ್ತುಕೊಂಡಾಗ ಜೀವನದ ಪ್ರತಿಯೊಂದು ಕ್ಷಣಕ್ಕೂ ಹೊಸ ಅರ್ಥ ಸಿಗುತ್ತದೆ. ಸಣ್ಣ ಸಂತೋಷಗಳಲ್ಲೂ ಆನಂದ ಕಾಣಲು ಸಾಧ್ಯವಾಗುತ್ತದೆ. ಸಂಬಂಧಗಳ ಮೌಲ್ಯ ತಿಳಿಯುತ್ತದೆ. ಕೃತಜ್ಞತೆಯ ಭಾವನೆ ಬೆಳೆಯುತ್ತದೆ. ಮನಸ್ಸಿನಲ್ಲಿ ಶಾಂತಿ ನೆಲೆಸುತ್ತದೆ. ಬದುಕು ಕೇವಲ ದಿನಗಳನ್ನು ಕಳೆಯುವ ಪ್ರಕ್ರಿಯೆಯಾಗಿ ಉಳಿಯದೆ, ಅರ್ಥಪೂರ್ಣ ಪಯಣವಾಗಿ ರೂಪುಗೊಳ್ಳುತ್ತದೆ.

ಕೊನೆಯಲ್ಲಿ ಹೇಳುವುದಾದರೆ, ತನ್ನೊಳಗಿನ ತಾನು ಎಚ್ಚೆತ್ತುಕೊಳ್ಳುವುದು ಜೀವನದ ಅತ್ಯಂತ ದೊಡ್ಡ ಸಾಧನೆ. ಇದು ಹೊರಗಿನ ಜಗತ್ತನ್ನು ಗೆಲ್ಲುವುದಕ್ಕಿಂತಲೂ ಮಹತ್ತರವಾದ ಗೆಲುವು. ಏಕೆಂದರೆ ತನ್ನನ್ನು ಗೆದ್ದವನು ಲೋಕವನ್ನೇ ಗೆಲ್ಲಬಲ್ಲನು. ಆತ್ಮಜ್ಞಾನ, ಆತ್ಮವಿಶ್ವಾಸ ಮತ್ತು ಆತ್ಮಸಾಕ್ಷಾತ್ಕಾರದ ಬೆಳಕು ವ್ಯಕ್ತಿಯ ಬದುಕನ್ನು ಮಾತ್ರವಲ್ಲ, ಸಮಾಜವನ್ನೂ ಬೆಳಗಬಲ್ಲದು. ಆದ್ದರಿಂದ ಪ್ರತಿಯೊಬ್ಬರೂ ತಮ್ಮೊಳಗೆ ಒಮ್ಮೆ ನೋಡುವ ಪ್ರಯತ್ನ ಮಾಡಬೇಕು. ಏಕೆಂದರೆ ಜೀವನದ ನಿಜವಾದ ಬೆಳಕು ಹೊರಗಲ್ಲ, ನಮ್ಮೊಳಗೇ ಅಡಗಿದೆ. ಆ ಬೆಳಕು ಹೊಳೆಯುವ ಕ್ಷಣವೇ ತನ್ನೊಳಗಿನ ತಾನು ಎಚ್ಚೆತ್ತುಕೊಂಡ ಕ್ಷಣ.

# ಜನಪದರ ಭಾಷಾ ಬಲ

ಅವಲಕ್ಕಿ ಪವವಲ್ಕಿ
ಕಾಂಚನ-ಮಿಣ ಮಿಣ
ಡಾಂ ಡೂಂ-ಠಸ್ ಪುಸ್
ಕೊಯ್‌ಂ ಕೊಟರ್

ಮಕ್ಕಳು ಚಕ್ಕಳ ಬಕ್ಕಳ ಕುಳಿತು ಕೈಗಳನ್ನು ಅಂಗಾತ ಮತ್ತು ಕವುಚಿ ಆಟವಾಡುತ್ತಾ ಹಾಡುವ ಜನಪದ ಹಾಡಿದು. ಬಹಳ ಸರಳ ಹಾಡು. ಈ ಹಾಡಿನಲ್ಲಿ ಮೇಲ್ನೋಟದಲ್ಲಿ ಯಾವುದೇ ಗಂಭೀರತೆ ಕಾಣದು. ಕೇವಲ ಪ್ರಾಸ ಮತ್ತು ಕರ್ಣರಮ್ಯತೆ ಮಾತ್ರ ಗೋಚರಿಸುತ್ತದೆ. ಆದರೆ ನಮ್ಮ ಜನಪದರು ಇಂತಹ ಹಾಡುಗಳೊಳಗೆ ಬದುಕನ್ನು ಹೆಣೆದಿರುವುದು ಅವರ ಭಾಷಾ ಬಲ, ಸಾಹಿತ್ಯ ಜ್ಞಾನದ ಹಿರಿಮೆಗೆ ಸಾಕ್ಷಿ.

ಅವಲಕ್ಕಿ ಬಹಳ ತೆಳ್ಳಗೆ ಹಗುರವಾದ ಪೌಷ್ಟಿಕ ಆಹಾರ. ಬಹಳ ಖುಷಿ ನೀಡುವ ಆಹಾರ. ದೋಸೆಗೂ ಆಗುತ್ತದೆ, ಪಂಚ ಕಜ್ಜಾಯಕ್ಕೂ ಸೈ. ಕೈಗೂ ಸೈ ಕಾಲಿಗೂ ಸೈ ಎಂಬಂತೆ ಇರುವವರು ಮಕ್ಕಳು. ಅವರನ್ನು ಯಾವ ರೀತಿಯಲ್ಲೂ ಬಾಗಿಸಬಹುದು(ರೂಪಿಸಬಹುದು). ಗಿಡವಾಗಿ ಬಗ್ಗುತ್ತದೆ ಆದರೆ ಮರವಾದದ್ದನ್ನು ಬಾಗಿಸಲಾಗದು. ಎಳೆಯ ಮಕ್ಕಳು ಬಾಗುವುದರ ಜೊತೆಗೆ ಹಿರಿಯರನ್ನೂ ಅವರತ್ತ ಸೆಳೆಯುತ್ತಾರೆ (ಬಾಗಿಸುತ್ತಾರೆ). ದೊಡ್ಡವರಾದ ಮೇಲೆ ಅವರು ಬಾಗುವುದಿಲ್ಲ. ಬಗ್ಗಿಸುವ ಪ್ರಯತ್ನ ಮಾಡುತ್ತಾರೆ. ಅದಕ್ಕೇ ಹೇಳುವುದು ಮಕ್ಕಳು ಅವಲಕ್ಕಿ ಹಾಗೆ. ಉಸುಲಿಗೂ ಅಗುತ್ತದೆ, ಉಪ್ಪುಕರಿಗೂ ಆದೀತು, ಮಿಕ್ಸರಿಗೂ ಬೇಕು. ಕುಚೇಲ ತಂದ ಅವಲಕ್ಕಿಯನ್ನು ಕೃಷ್ಣ ಬಾಚಿ ಬಾಚಿ ತಿಂದನಂತೆ. ಇದು ಅವಲಕ್ಕಿಯ ಮಹತ್ವ.

ಸರಿ ಸುಮಾರು ಬದುಕಿನ ಕಾಲು ಭಾಗ ಹೀಗೆಯೇ ಕಳೆಯುತ್ತದೆ. ಪಾವು ಎಂದರೆ ಕಾಲು. ಜೀವನದ ಕಾಲು ಭಾಗವೆಂದರೆ ಶಂಕರಾಚಾರ್ಯರದು ಎಂಟು ವರ್ಷ. ಶಿವಾಚಾರ್ಯ ಸ್ವಾಮೀಜಿಯವರದ್ದು ಇಪ್ಪತ್ತೈದು ವರ್ಷ. ಒಂದು ಮಧ್ಯಮ ಭಾಗವಾಗಿ ಪರಿಗಣಿಸಿದರೆ ಹದಿನೆಂಟು ಅಥವಾ ಅದರ ಆಸು ಪಾಸು. ಜೀವನದ ಕಾಲು ಭಾಗ ಯಾವುದೇ ಹೊಣೆಗಾರಿಕೆಯಿರದೆ ಎಲ್ಲರಿಗೂ ಸಂತಸ ನೀಡುತ್ತಾ ಸ್ವಯಂ ಆನಂದಾನುಭೂತಿಯಿಂದಿರುವ ಹದಿಹರೆಯದ ಕಾಲ. ಖರ್ಚಿಗೆ ಹೆತ್ತವರು ಇದ್ದಾರೆ ಎನ್ನುವ ಸುಲಭದ ಕಾಲ. ಕಾಲು ಬಾಗದ ಜೀವನದ ನಂತರ ಹೇಗಿದೆಯೆಂದರೆ ಕಾಂಚನ ಮಿಣ ಮಿಣ ಎನ್ನಲಾಗಿದೆ.

ಹದಿನೆಂಟು ದಾಟಿದ ನಂತರ ಹಂತ ಹಂತವಾಗಿ ಉದ್ಯೋಗದತ್ತ ಸರಿಯುತ್ತಾ ಬದುಕಿನ ಹೊಸ ಪಥದತ್ತ ಸಾಗುತ್ತೇವೆ. ಕೆಲಸ ಅಥವಾ ಉದ್ಯಮ ಹಣ ಕಾಸನ್ನು ತರುತ್ತದೆ. ಅದೇ ಮಿಣ ಮಿಣ. ಸಂಪಾದನೆಗೆ ಸರಿಯಾಗಿ ಬದುಕು ಏರು ಪೇರುಗಳನ್ನು ಕಾಣುತ್ತದೆ. ಕೆಲವರಿಗೆ ಕಾರು, ಇನ್ನೂ ಕೆಲವರಿಗೆ ಬೈಕು, ಇನ್ನೂ ಕೆಲವರಿಗೆ ಸ್ಕೂಟರ್, ಬಡವರಿಗೆ ಸೈಕಲು ಅಥವಾ ನಡಿಗೆ. ಹೀಗೆ ನಮ್ಮಲ್ಲಿ ಮಿಣ ಮಿಣವಾಗುವುದರ ಆಧಾರದಲ್ಲಿ ಬದುಕಿನ ನಡಿಗೆಯಿರುತ್ತದೆ. ಜನಾರ್ದನ ರೆಡ್ಡಿ ಹೆಲಿಕಾಪ್ಟರ್ ಇಟ್ಟುಕೊಂಡಿದ್ದಾರೆ. ಮನೆ ಇದೆ. ಕಾರು ಇದೆ. ಸಂಪಾದನೆಯಿದೆಯೆನ್ನುವಾಗ ಧಾಮ್ ಧೂಮ್ ಆರಂಭ.

ಧೂಂ ಧಾಂ ಎಂದರೆ ಮದುವೆ. ಎಷ್ಟೋ ಕನ್ಯಾಪಿತೃಗಳು ಬರುತ್ತಾರೆ. ಕನ್ಯಾ ದಾನವನ್ನು ನೀಡುವ ಮಾತು ಆಡುತ್ತಾರೆ. ವರೋಪಚಾರದ ದೊಡ್ಡ ಕೊಡುಗೆಯನ್ನೂ ನೀಡುತ್ತಾರೆ. ಧಾಂ ಧೂಮ್ ಮದುವೆಯೂ ಆಯಿತು.

ಈಗ ಟೆನ್ಶನ್ ಆರಂಭವಾಗುತ್ತದೆ. ಪತ್ನಿ ಗರ್ಭಿಣಿ. ಆವಳ ಆರೈಕೆ, ಹುಟ್ಟಿದ ಮಗುವಿನ ಲಾಲನೆ ಪಾಲನೆ, ಆರೋಗ್ಯ, ಶಿಕ್ಷಣ, ಮೂಲ ಅಗತ್ಯಗಳ ಪೂರೈಕೆ, ಅಗತ್ಯ ಮಾರ್ಗದರ್ಶನ... ಹೀಗೆ ಒಂದರ ಮೇಲೊಂದು ಹೊರೆಗಳಿಂದ ಟೆನ್ಶನ್. ಈ ಎಲ್ಲಾ ಟೆನ್ಶನ್‌ಗಳಿಂದ ಹೊರೆಗಳು ಬರುವಾಗ ಜೀವನ ಠುಸ್ ಪುಸ್ ಆಗುತ್ತದೆ.



ಹೆಂಡತಿ, ಮಕ್ಕಳು, ಮುಂದೆ ಮೊಮ್ಮಕ್ಕಳೂ ಆಗುತ್ತಾರೆ. ಹಿಂದೆ ಬಾಗುತ್ತಿದ್ದ ಮಕ್ಕಳು ಈಗ ಬಾಗುವುದಿಲ್ಲ. ಹೆತ್ತವರನ್ನೂ ಅವರು ಬಗ್ಗಿಸುವ ಪ್ರಯತ್ನ ಮಾಡುತ್ತಾರೆ. ಅಷ್ಟರಲ್ಲಿ ಸೊಸೆಯದೋ ಅಳಿಯನದೋ ಗೃಹ ಪ್ರವೇಶ ನಡೆಯುತ್ತದೆ. ಬಂದವರು ಮತ್ತು ಮಕ್ಕಳು ಹೆತ್ತವರನ್ನು ಬಾಯಿ ಮುಚ್ಚಿ ಮನೆಯ ಮೂಲೆಯಲ್ಲಿ ಕುಳಿತುಕೋ ಎನ್ನಬಹುದು, ಮನೆಯಿಂದ ಹೊರಗೆ ಕಳುಹಿಸುವ ಏರ್ಪಾಟುಗಳಿಗೆ ವೇದಿಕೆ ಸಿದ್ಧಮಾಡಬಹುದು. ಅವರು ಕೊಟ್ಟರೆ ತಿಂಡಿ, ಇಲ್ದೇ ಇದ್ದರೆ ಉಪವಾಸ. ದೇಹದಲ್ಲಿ ಶಕ್ತಿ ಕಡಿಮೆಯಾಗುತ್ತದೆ. ಅನಾರೋಗ್ಯದ ಸಮಸ್ಯೆ ಎದುರಾಗುತ್ತದೆ. ಔಷಧಿಗೆ ಹಣವಿಲ್ಲ. ಸಂಪಾದಿಸಲು ಶಕ್ತಿಯಿಲ್ಲ. ಕಾಯಿಲೆಯಿಂದ ಸಂಕಟ ಪಡುತ್ತಾ ಮನೆಯ ಮೂಲೆಯಲ್ಲಿ ಬಿದ್ದಿರಬೇಕು. ಮಾತನಾಡಲು ಮಕ್ಕಳೂ ಬರುವುದಿಲ್ಲ. ಮಕ್ಕಳೇ ಮೊಮ್ಮಕ್ಕಳನ್ನಂತೂ ದೂರವಿರಿಸುವ ಎಲ್ಲಾ ಏರ್ಪಾಟುಗಳನ್ನು ಮಾಡುತ್ತಾರೆ. ಮುದುಕ ಮುದುಕಿಯರು ಮನೆಯ ಮೂಲೆಯಲ್ಲಿ ಕೊಂಯ್ ಎಂದು ಏದುಸಿರು ಬಿಡುತ್ತಾ ದಿನ ದೂಡಬೇಕು. ಹೀಗೆ ಕಷ್ಟ ಪಡುವುದನ್ನು ನೋಡಲಾಗದ ಭಗವಂತ ತನ್ನ ಬಳಿಗೆ ಕರೆಸುತ್ತಾನೆ. ದೇಹ ಬಿಟ್ಟ ಆತ್ಮ ದೇವೈಕ್ಯವಾಗುತ್ತದೆ. ಇಷ್ಟರವರೆಗಿದ್ದವನು ಈಗ ಕೊಟರ್ (ಗೊಟರ್) ಅಥವಾ ಗೊಟಕ್. ಅಬ್ಬ! ನಾಲ್ಕು ಸಾಲಿನ ಹಾಡು. ಒಳಾರ್ಥ ನಲುವತ್ತು ಸಾಲು! ನಮ್ಮ ಹಿರಿಯ ಜನಪದರ ಮೇಧಾ ಶಕ್ತಿ , ಸಾಹಿತ್ಯ ಬಲ ವಿಚಿತ್ರ ಮತ್ತು ಅಪರೂಪ.

– **ರಮೇಶ ಎಂ. ಬಾಯಾರು,** ಬಂಟ್ವಾಳ




# ಕೃತಕ ಬುದ್ಧಿಮತ್ತೆ: ವಿವೇಚನೆಯ ಹೆಜ್ಜೆ ಅಗತ್ಯ

ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವು ಶೀಘ್ರದಲ್ಲೇ ವಿಶ್ವದ ಶೇಕಡ 3ರಷ್ಟು ವಿದ್ಯುತ್ ಮತ್ತು ಕುಡಿಯಲು ಅಗತ್ಯ ಇರುವುದಕ್ಕಿಂತ ಹೆಚ್ಚಿನ ನೀರನ್ನು ಬಳಸಬಹುದು ಎಂದು ವಿಶ್ವಸಂಸ್ಥೆಯ ವರದಿ ಎಚ್ಚರಿಸಿದೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ನಮ್ಮ ದೈನಂದಿನ ಜೀವನದ ಭಾಗವಾಗುತ್ತಿದೆಯಾದರೂ, ಅದರ ಹಿಂದೆ ಕೆಲಸ ಮಾಡುವ ಡೇಟಾ ಸೆಂಟರ್‌ಗಳು ಭೂಮಿಯ ನೈಸರ್ಗಿಕ ಸಂಪನ್ಮೂಲಗಳನ್ನು ಭಾರಿ ಪ್ರಮಾಣದಲ್ಲಿ ಲೂಟಿ ಮಾಡುತ್ತಿವೆ. ಒಂದು ಸಣ್ಣ ಎಐ ಚಾಟ್ ಬಾಟ್‌ಗೆ ನಾವು ಕೇಳುವ ಪ್ರಶ್ನೆಯಿಂದ ಹಿಡಿದು ದೊಡ್ಡ ಎಐ ಮಾದರಿಗಳ ತರಬೇತಿಯವರೆಗೆ ಪ್ರತಿಯೊಂದಕ್ಕೂ ಅಪಾರ ಪ್ರಮಾಣದ ವಿದ್ಯುತ್ ಮತ್ತು ನೀರು ಬೇಕಾಗುತ್ತದೆ. ಜಾಗತಿಕ ವಿದ್ಯುತ್ ಬಳಕೆಯಲ್ಲಿ ಶೇಕಡ 3 ಎಂದರೆ ಅದು ಇಡೀ ಜಪಾನ್ ಅಥವಾ ಜರ್ಮನಿಯಂತಹ ದೊಡ್ಡ ದೇಶಗಳು ಬಳಸುವ ಒಟ್ಟು ವಿದ್ಯುತ್‌ಗೆ ಸಮನಾಗಿರುತ್ತದೆ. ನಾವು ಬಳಸುವ ಚಾಟ್ ಬಾಟ್‌ಗಳು, ಇಮೇಜ್ ಜನರೇಟರ್‌ಗಳು ಮತ್ತು ಸರ್ಚ್ ಇಂಜಿನ್‌ಗಳ ಹಿಂದೆ ಹಗಲಿರುಳು ಕೆಲಸ ಮಾಡುವ ಲಕ್ಷಾಂತರ ಸೂಪರ್ ಕಂಪ್ಯೂಟರ್‌ಗಳಿರುತ್ತವೆ. ಇವುಗಳಿಗೆ ನಿರಂತರ ವಿದ್ಯುತ್ ಬೇಕು.

ಗೂಗಲ್‌ನಲ್ಲಿ ಒಂದು ಸಾಮಾನ್ಯ ಎಐ ಹುಡುಕಾಟ ನಡೆಸುವುದಕ್ಕಿಂತ, ಚಾಟ್ ಬಾಟ್‌ನಲ್ಲಿ ಒಂದು ಪ್ರಶ್ನೆಗೆ ಉತ್ತರ ಪಡೆಯಲು ಕನಿಷ್ಠ 10 ಪಟ್ಟು ಹೆಚ್ಚು ವಿದ್ಯುತ್ ವ್ಯಯವಾಗುತ್ತದೆ. ಜಗತ್ತಿನ ಬಹುತೇಕ ವಿದ್ಯುತ್ ಇಂದಿಗೂ ಕಲ್ಲಿದ್ದಲು ಮತ್ತು ನೈಸರ್ಗಿಕ ಉತ್ಪಾದನೆಯಾಗುತ್ತಿದೆ. ಎಐಗಾಗಿ ವಿದ್ಯುತ್ ಬಳಕೆ ಹೆಚ್ಚಾದಂತೆ ಕಾರ್ಬನ್ ಹೊರಸೂಸುವಿಕೆ ಹೆಚ್ಚಾಗಿ, ಜಾಗತಿಕ ತಾಪಮಾನ ಮತ್ತಷ್ಟು ಏರಿಕೆಯಾಗುತ್ತದೆ. ಡೇಟಾ ಸೆಂಟರ್‌ಗಳಲ್ಲಿರುವ ಸಾವಿರಾರು ಗ್ರಾಫಿಕ್ ಪ್ರೊಸೆಸಿಂಗ್ ಯುನಿಟ್‌ಗಳು ನಿರಂತರವಾಗಿ ಕೆಲಸ ಮಾಡುವಾಗ ಭಾರಿ ಪ್ರಮಾಣದ ಶಾಖ ಉತ್ಪತ್ತಿಯಾಗುತ್ತದೆ.

ಈ ಕಂಪ್ಯೂಟರ್‌ಗಳನ್ನು ತಂಪಾಗಿಡಲು ಕೋಟ್ಯಂತರ ಲೀಟರ್ ಶುದ್ಧ ನೀರಿನ ಅಗತ್ಯವಿರುತ್ತದೆ. ವಿಶ್ವಸಂಸ್ಥೆ ಹೇಳುವಂತೆ, ಮನುಷ್ಯರ ಕುಡಿಯುವ ನೀರಿಗಿಂತ ಹೆಚ್ಚಿನ ನೀರನ್ನು ಈ ಯಂತ್ರಗಳನ್ನು ತಂಪಾಗಿಸಲು ಬಳಸಲಾಗುತ್ತಿದೆ. ಒಂದು ಅಂದಾಜಿನ ಪ್ರಕಾರ, ಎಐ ಜೊತೆ ನಡೆಸುವ ಪ್ರತಿ 20ರಿಂದ 50 ಪ್ರಶ್ನೋತ್ತರಗಳ ಸಂಭಾಷಣೆಗೆ ಸುಮಾರು ಅರ್ಧ ಲೀಟರ್ ನೀರು ಖರ್ಚಾಗುತ್ತದೆ.

ಜಗತ್ತಿನಾದ್ಯಂತ ಈಗಾಗಲೇ ಅಂತರ್ಜಲ ಮಟ್ಟ ಕುಸಿಯುತ್ತಿದೆ. ವಿಶ್ವದ ಪ್ರಮುಖ ನಗರಗಳು ನೀರಿನ ಅಭಾವ ಎದುರಿಸುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಡೇಟಾ ಸೆಂಟರ್‌ಗಳು ಸ್ಥಳೀಯ ಜಲಮೂಲಗಳನ್ನು ಬಳಸಿಕೊಂಡರೆ, ಜನಸಾಮಾನ್ಯರಿಗೆ ಕುಡಿಯುವ ನೀರಿನ ತತ್ವಾರ ಎದುರಾಗುತ್ತದೆ. ಅಲ್ಲದೆ, ಹಸಿರುಮನೆ ಅನಿಲಗಳ ಹೆಚ್ಚಳದಿಂದಾಗಿ ಅಕಾಲಿಕ ಮಳೆ, ಭೀಕರ ಬರಗಾಲ ಮತ್ತು ತಾಪಮಾನ ಏರಿಕೆಯಂತಹ ಸಮಸ್ಯೆಗಳು ತೀವ್ರಗೊಳ್ಳುತ್ತವೆ. ಅಮೆರಿಕ ಅಥವಾ ಯುರೋಪ್‌ನ ತಂತ್ರಜ್ಞಾನ ಕಂಪನಿಗಳು ತಮ್ಮ ಡೇಟಾ ಸೆಂಟರ್‌ಗಳನ್ನು ಏಷ್ಯನ್ ದೇಶಗಳಲ್ಲಿ ಅಥವಾ ಆಫ್ರಿಕಾದಲ್ಲಿ ಸ್ಥಾಪಿಸುತ್ತಿವೆ. ಇದರಿಂದ ಆ ದೇಶಗಳ ತಂತ್ರಜ್ಞಾನ ಮುಂದುವರಿಯಬಹುದು, ಆದರೆ ಅಲ್ಲಿನ ಸ್ಥಳೀಯ ನೀರು ಮತ್ತು ವಿದ್ಯುತ್ ಖಾಲಿಯಾಗುತ್ತದೆ. ಹಾಗಾಗಿ, ಕಂಪನಿಗಳು ಪರಿಸರ ಸ್ನೇಹಿ ಕ್ರಮಗಳನ್ನು ಕೈಗೊಳ್ಳಬೇಕಿದೆ. ಡೇಟಾ ಸೆಂಟರ್‌ಗಳನ್ನು ಸಂಪೂರ್ಣವಾಗಿ ಸೌರಶಕ್ತಿ ಮತ್ತು ಪವನಶಕ್ತಿ ಮೂಲಕ ನಿರ್ವಹಿಸುವ ಬಗ್ಗೆ ಚಿಂತನೆ ನಡೆಯಬೇಕಿದೆ. ಮೈಕ್ರೋಸಾಫ್ಟ್‌ನಂತಹ ಕಂಪನಿಗಳು ಈಗಾಗಲೇ ಸಮುದ್ರದ ತಳಭಾಗದಲ್ಲಿ ಡೇಟಾ ಸೆಂಟರ್ ಇಟ್ಟು, ಸ್ವಾಭಾವಿಕ ತಣ್ಣನೆಯ ನೀರನ್ನೇ ಬಳಸಿ ತಂಪಾಗಿಸುವ ಪ್ರಯೋಗಗಳನ್ನು ನಡೆಸುತ್ತಿವೆ. ತಂತ್ರಜ್ಞಾನದ ಬೆಳವಣಿಗೆಯ ಜೊತೆಗೆ ಭೂಮಿಯ ಉಳಿವೂ ಅಷ್ಟೇ ಮುಖ್ಯ ಎಂಬುದನ್ನು ಮರೆಯುವಂತಿಲ್ಲ.

– **ಕೆ.ಪಿ.ಅಶ್ವಿನ್** ರಾವ್

## ಸಮರ್ಪಕ ರಸಗೊಬ್ಬರ ಪೂರೈಕೆಗೆ ಆಗ್ರಹಿಸಿ ಪ್ರತಿಭಟನೆ

» ಮೊದಲನೇ ಪುಟದಿಂದ

ಗೊಬ್ಬರ ಮಾರಾಟವಾಗುತ್ತಿದೆ. ಸರ್ಕಾರ ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಎಫ್‌ಐಡಿ ವ್ಯವಸ್ಥೆ ಜಾರಿಯಾದರೆ ರೈತರಿಗೆ ಇನ್ನಷ್ಟು ಸಮಸ್ಯೆಯಾಗಲಿದೆ. ಗೊಬ್ಬರ ಕೊರತೆಯಿಂದ ಬೆಳೆ ಹಾನಿಯಾದರೆ ಬ್ಯಾಂಕ್ ಸಾಲವನ್ನು ರೈತರು ಹೇಗೆ ತೀರಿಸುತ್ತಾರೆಂದು ಪ್ರಶ್ನಿಸಿದ ಅವರು, ಸಾಲದ ಒತ್ತಡದಿಂದ ರೈತರು ಆತ್ಮಹತ್ಯೆಗೆ ಶರಣಾಗುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವುದು ಕಳವಳಕಾರಿ ಬೆಳವಣಿಗೆಯಾಗಿದೆ ಎಂದು ಹೇಳಿದರು.

ಪೊಟ್ಯಾಶ್ ಸೇರಿ ವಿವಿಧ ಗೊಬ್ಬರಗಳ ಬೆಲೆಯನ್ನು ಹೆಚ್ಚಿಸಿರುವುದರಿಂದ ಕೃಷಿ ವೆಚ್ಚ ದುಪ್ಪಟ್ಟಾಗಿದ್ದು, ಉತ್ಪಾದನಾ ವೆಚ್ಚಕ್ಕೆ ತಕ್ಕಂತೆ ಬೆಳೆಗಳಿಗೆ ಬೆಲೆ ಸಿಗದ ಕಾರಣ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರ ಕೂಡಲೇ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿ ಜಿಲ್ಲೆಯಲ್ಲಿ ಯೂರಿಯಾ ಹಾಗೂ ಇತರೆ ಗೊಬ್ಬರಗಳನ್ನು ಸಮರ್ಪಕವಾಗಿ ಪೂರೈಸಬೇಕೆಂದು ಆಗ್ರಹಿಸಿದರು. ರೈತ ಸಂಘದ ರಾಜ್ಯ ಉಪಾಧ್ಯಕ್ಷ ಆನೆಕೆರೆ ರವಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಯರಾಂ, ಜಯಣ್ಣ, ಶಿವರಾಮೇಗೌಡ, ಕಮಲಮ್ಮ, ಪವಿತ್ರ ಇತರರಿದ್ದರು.

# ಪ್ರತಿಷ್ಠೆಯ ಕಣವಾದ ಪರಿಷತ್ ಚುನಾವಣೆ

## ಮತ ವಿಭಜನೆ, ಅಡ್ಡ ಮತದಾನ ತಡೆಯುವುದು ಮೂರು ಪಕ್ಷಗಳಿಗೂ ಸವಾಲು

• ಪ್ರಜೋದಯ ವರದಿ

**ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಯ ಕಾವು ಜೋರಾಗಿದ್ದು, ಮೂರು ರಾಜಕೀಯ ಪಕ್ಷಗಳಿಗೆ ಇದು ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿದೆ. ಚುನಾವಣೆಗೆ ದಿನಗಣನೆ ಆರಂಭವಾಗಿರುವ ಬೆನ್ನಲ್ಲೇ ಅಡ್ಡ ಮತದಾನ ಮತ್ತು ಕುದುರೆ ವ್ಯಾಪಾರದ ಭೀತಿ ಆಡಳಿತಾ ರೂಢ ಕಾಂಗ್ರೆಸ್ ಹಾಗು ಪ್ರತಿಪಕ್ಷ ಜೆಡಿಎಸ್ ಅನ್ನು ಆವರಿಸಿದೆ.

ಜೂ.18ರಂದು ನಡೆಯಲಿರುವ ವಿಧಾನ ಪರಿಷತ್ ಚುನಾವಣೆಯಲ್ಲಿ ಪ್ರತಿ ಶಾಸಕರ ಮತವೂ ನಿರ್ಣಾಯಕವಾಗಿದ್ದು, ಯಾವುದೇ ರೀತಿಯ ಮತ ವಿಭಜನೆ ಅಥವಾ ಅಡ್ಡ ಮತದಾನವನ್ನು ತಡೆಯುವುದು ಪಕ್ಷಗಳಿಗೆ ಸವಾಲಾಗಿದೆ.

ಕೆಪಿಸಿಸಿ ಖಜಾಂಚಿ ವಿನಯ್ ಕಾರ್ತಿಕ್ ಅವರನ್ನು ಕಣಕ್ಕಿಳಿಸುವ ಮೂಲಕ ಅವಿರೋಧ ಆಯ್ಕೆಯ ಅವಕಾಶವನ್ನು ತಪ್ಪಿಸಿದೆ. ಜಿದ್ದಾಜಿದ್ದಿನ ಚುನಾವಣೆಯ ಕಣ ರಂಗೇರಿದೆ. ಖುದ್ದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ಹಾಲಿ ಸದಸ್ಯ ತಿಪ್ಪಣ್ಣಪ್ಪ ಕಮಕನೂರ್, ಎಐಸಿಸಿ ಕಾರ್ಯದರ್ಶಿ ಪಿ.ವಿ. ಮೋಹನ್, ಕಾಂಗ್ರೆಸ್ ಮುಖಂಡ ಶಿವಣ್ಣ ಮಳವಳ್ಳಿ ಅವರನ್ನು ಅಭ್ಯರ್ಥಿಗಳನ್ನಾಗಿ ಕಣಕ್ಕಿಳಿಸಲಾಗಿದೆ.

ಅತ್ತ ಬಿಜೆಪಿ ಲಿಂಗಾರಾಜ ಪಾಟೀಲ್ ಮತ್ತು ರಘು ಕೌಟಿಲ್ಯ ಅವರನ್ನು ಅಭ್ಯರ್ಥಿಗಳನ್ನಾಗಿ ಮಾಡಿದೆ. ಜೆಡಿಎಸ್ ಗೋವಿಂದ ರಾಜ್ ಅವರಿಂದ ನಾಮಪತ್ರ ಸಲ್ಲಿಸಿದೆ. ಜನಪ್ರಾತಿನಿಧ್ಯ ಕಾಯ್ದೆ ಪ್ರಕಾರ ಪ್ರತಿಯೊಂದು ಸ್ಥಾನ ಗೆಲ್ಲಲು 28 ಮತಗಳ ಅಗತ್ಯ ಇದೆ. ರಾಜ್ಯ ಸಭೆಗೆ ತೆರೆದ ಮತದಾನವಾದರೆ ವಿಧಾನಪರಿಷತ್ತಿನ ಚುನಾವಣೆಯಲ್ಲಿ ಗೌಪ್ಯ ಮತದಾನವಾಗಲಿದೆ. ಹೀಗಾಗಿ ಸೋಲು- ಗೆಲುವು ಲೆಕ್ಕಾಚಾರ ತೀವ್ರ ಕುತೂಹಲ ಕೆರಳಿಸಿದೆ.



ವಿಧಾನಸಭೆಯಲ್ಲಿ ಪ್ರಸ್ತುತ ಧಾರವಾಡ ಕ್ಷೇತ್ರದ ಶಾಸಕ ವಿನಯ್ ಕುಲಕರ್ಣಿ ಬಿಜೆಪಿ ಮುಖಂಡ ಯೋಗೇಶ್ ಗೌಡ ಅವರ ಕೊಲೆ ಪ್ರಕರಣದಲ್ಲಿ ಅಪರಾಧಿಯಾಗಿ ಜೈಲು ಸೇರಿದ್ದಾರೆ. ಅದರಿಂದಾಗಿ ಒಂದು ಸ್ಥಾನ ತೆರವಾಗಿದೆ. ಯೋಜನಾ ಸಚಿವರಾಗಿದ್ದ ಡಿ. ಸುಧಾಕರ್ ಅನಾರೋಗ್ಯದಿಂದ ಮೃತಪಟ್ಟಿದ್ದು, ಅವರು ಪ್ರತಿನಿಧಿಸುತ್ತಿದ್ದ ಹಿರಿಯೂರು ಕ್ಷೇತ್ರ ಖಾಲಿಯಿದೆ. ಎರಡೂ ಕ್ಷೇತ್ರಗಳು ತೆರವಾದ ಬಳಿಕ 224ರಲ್ಲಿ 222 ಸ್ಥಾನಗಳು ಉಳಿದುಕೊಂಡಿವೆ.

ಒಟ್ಟು 7 ಸ್ಥಾನಗಳಿಗೆ ಸದಸ್ಯರ ಆಯ್ಕೆಯಾಗಬೇಕಿದ್ದು, ಜನ ಪ್ರಾತಿನಿಧ್ಯ ಕಾಯ್ದೆ ಸೂತ್ರದ ಅನುಸಾರ 7 ಸದಸ್ಯರ ಜೊತೆಗೆ ಒಂದು ಪಾಯಿಂಟ್ ಸೇರ್ಪಡೆಗೊಳಿಸಿ, ಒಟ್ಟು 8 ಸ್ಥಾನಗಳೆಂದು ಲೆಕ್ಕ ಹಾಕಲಾಗುತ್ತದೆ. ಸದಸ್ಯರ ಸಂಖ್ಯಾಬಲವನ್ನು ಅದರಿಂದ ಭಾಗಿಸುವುದರಿಂದ ಪ್ರತಿ ಅಭ್ಯರ್ಥಿಗೆ 27.75 ಮತಗಳು ಬೇಕು. ಇದನ್ನು ರೌಂಡಾಫ್ ಮಾಡುವುದರಿಂದ 28ಮತಗಳನ್ನು ಲೆಕ್ಕ ಹಾಕಲಾಗುತ್ತದೆ.

ಮೊದಲ ಪ್ರಾಶಸ್ತ್ಯದಲ್ಲಿ 28 ಮತ ಪಡೆದವರು ನೇರವಾಗಿ ಗೆಲುವು ಸಾಧಿಸುತ್ತಾರೆ. ಒಂದು ವೇಳೆ ಕಡಿಮೆ ಮತ ಬಂದರೆ, ದ್ವಿತೀಯ ಪ್ರಾಶಸ್ತ್ಯದ ಮತಗಳನ್ನು ಪಾಯಿಂಟ್ 25 ಅಂಶದ ಆಧಾರದ ಮೇಲೆ ಲೆಕ್ಕ ಹಾಕಲಾಗುತ್ತದೆ. ದ್ವಿತೀಯ ಪ್ರಾಶಸ್ತ್ಯದ ಮತಗಳಿಂದ ಗೆಲುವು ನಿರ್ಧರಿಸಲಾಗದಿದ್ದರೆ, ಹೊರ ಹಾಕುವ (ಎಲಿಮಿನೇಷನ್) ಪ್ರಕ್ರಿಯೆ ಆರಂಭಿಸಲಾಗುತ್ತದೆ. ಅತೀ ಕಡಿಮೆ ಮತ ಪಡೆದವರನ್ನು ಹೊರಹಾಕುವ ಮೂಲಕ ಉಳಿದವರನ್ನು ಗೆದ್ದಿದ್ದಾರೆಂದು ಘೋಷಿಸಲು ಅವಕಾಶಗಳಿವೆ.

**ಸಂಖ್ಯಾಬಲದ ಲೆಕ್ಕಾಚಾರ**

5 ಅಭ್ಯರ್ಥಿಗಳನ್ನು ಕಣಕ್ಕಿಳಿಸಿರುವ ಕಾಂಗ್ರೆಸ್ ವಿಧಾನಸಭೆಯಲ್ಲಿ 134 ಸದಸ್ಯರನ್ನು ಹೊಂದಿದೆ. ಸ್ಪೀಕರ್ ಅವರನ್ನೊಳಗೊಂಡರೆ 135 ಶಾಸಕರ ಸಂಖ್ಯಾಬಲವಾಗಲಿದೆ. ಪಕ್ಷೇತರರಾದ ಹರಪ್ಪನಹಳ್ಳಿ ಕ್ಷೇತ್ರದ ಲತಾ ಮಲ್ಲಿಕಾರ್ಜುನ್, ಗೌರಿಬಿದನೂರು ಕ್ಷೇತ್ರದ ಕೆ.ಹೆಚ್.ಪುಟ್ಟಸ್ವಾಮಿ ಅವರು ಕಾಂಗ್ರೆಸ್‌ಗೆ ಬೆಂಬಲ ನೀಡುವುದಾಗಿ ಮೊದಲೇ ಘೋಷಿಸಿದ್ದಾರೆ.

ಬಿಜೆಪಿಯಿಂದ ಉಚ್ಚಾಟಿತರಾಗಿರುವ ಮೂವರು ಶಾಸಕರ ಪೈಕಿ 2 ಮತಗಳು ಕಾಂಗ್ರೆಸ್‌ಗೆ ಬರುವ ಅಂದಾಜುಗಳಿವೆ. ಮೇಲುಕೋಟೆ ಕ್ಷೇತ್ರದ ದರ್ಶನ ಪುಟ್ಟಣ್ಣಯ್ಯ ಕೂಡ ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸಬಹುದೆಂಬ ಲೆಕ್ಕಾಚಾರಗಳಿವೆ. ಜೆಡಿಎಸ್‌ನಿಂದ ಒಂದು ಮತವನ್ನು ಪಡೆಯುವ ವಿಶ್ವಾಸದಲ್ಲಿ ಕಾಂಗ್ರೆಸ್ ನಾಯಕರಿದ್ದಾರೆ. ಮುಂದುವರೆದ ಕಾರ್ಯಾಚರಣೆಯಲ್ಲಿ ಬಿಜೆಪಿಯ ಉಚ್ಚಾಟಿತ ಮತ್ತೊಬ್ಬ ಶಾಸಕರನ್ನು ಹಾಗು ಜೆಡಿಎಸ್‌ನ ಇನ್ನೂ ಇಬ್ಬರೂ ಶಾಸಕರಿಗೆ ಕಾಂಗ್ರೆಸ್ ನಾಯಕರು ಗಾಳ ಹಾಕಿದ್ದಾರೆ.

ಬಿಜೆಪಿ 62 ಶಾಸಕರನ್ನು ಹೊಂದಿದ್ದು 56 ಮತಗಳಿಂದ ತನ್ನಿಬ್ಬರು ಅಭ್ಯರ್ಥಿಗಳನ್ನು ಗೆಲ್ಲಿಸಿ ಕೊಳ್ಳಬಹುದು. ಜೆಡಿಎಸ್ 18 ಶಾಸಕರನ್ನು ಒಳಗೊಂಡಿದೆ. ಬಿಜೆಪಿಯಿಂದ ಹೆಚ್ಚುವರಿಯಾಗಿ ಉಳಿಯುವ 6 ಶಾಸಕರನ್ನು ಒಳಗೊಂಡರೆ, ಜೆಡಿಎಸ್ 24 ಮತಗಳನ್ನು ಪಡೆದಂತಾಗುತ್ತದೆ. ಕೆಆರ್‌ಆರ್‌ಪಿ ಪಕ್ಷದಿಂದ ಆಯ್ಕೆಯಾಗಿ ನಂತರ ಬಿಜೆಪಿಗೆ ಸೇರಿರುವ ಜನಾರ್ದನ್ ರೆಡ್ಡಿ ಎನ್‌ಡಿಎ ಅಭ್ಯರ್ಥಿಯನ್ನು ಬೆಂಬಲಿಸುವ ಸಾಧ್ಯತೆ ಇರುವುದರಿಂದ ಜೆಡಿಎಸ್‌ನ ಅಭ್ಯರ್ಥಿ 25 ಮತಗಳನ್ನು ಪಡೆಯಬಹುದು ಎನ್ನಲಾಗುತ್ತದೆ.

### ಕಾಂಗ್ರೆಸ್‌ನಲ್ಲಿ ಆಂತರಿಕ ಬೇಗುದಿ

ಕಾಂಗ್ರೆಸ್‌ನಲ್ಲಿ ಇರುವ ಆಂತರಿಕ ಬೇಗುದಿಯ ಒಳ ಏಟಿನ ಆತಂಕವೂ ನಾಯಕರನ್ನು ಚಿಂತೆಗೀಡು ಮಾಡಿದೆ. ಈ ಹಿಂದೆ ಮಲ್ಲಿಕಾರ್ಜುನ ಖರ್ಗೆ ಅವರು ತಮ ಆಪ್ತರನ್ನು ಕಣಕ್ಕಿಳಿಸಿ ದಾಗ ರಹಸ್ಯ ಮತದಾನದ ಪ್ರಭಾವದಿಂದ ಭೈರತಿ ಸುರೇಶ್ ಸುಲಭವಾಗಿ ಗೆಲುವು ಕಂಡಿದ್ದರು. ಇತಿಹಾಸ ಮರುಕಳಿಸುತ್ತದೆಯೇ ಅಥವಾ ಕಾಂಗ್ರೆಸ್ ನಾಯಕತ್ವವು ಅಗ್ನಿ ಪರೀಕ್ಷೆಯನ್ನು ನಿರ್ವಿಘ್ನವಾಗಿ ಗೆಲ್ಲುತ್ತದೆಯೇ ಎಂಬ ಪ್ರಶ್ನೆಗಳು ಕಾಡಲಾರಂಭಿಸಿವೆ.

### ಜೆಡಿಎಸ್ ಶಾಸಕರ ಸೆಳೆಯಲು ತಂತ್ರ

ಕಾಂಗ್ರೆಸ್ ಪಕ್ಷ ತನ್ನ ಐದನೇ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಲು ಜೆಡಿಎಸ್ ಶಾಸಕರ ಮತಗಳನ್ನು ಸೆಳೆಯುವ ಸಾಧ್ಯತೆ ಇದೆ. ಈ ಹಿನ್ನಲೆ ಜೆಡಿಎಸ್ ಶಾಸಕರನ್ನು ಒಗ್ಗೂಡಿಸಿ, ಅವರಿಗೆ ಒಗ್ಗಟ್ಟಿನ ಸಂದೇಶ ರವಾನಿಸಲು ರೆಸಾರ್ಟ್‌ಗೆ ಸ್ಥಳಾಂತರಿಸುವ ಕುರಿತು ಜೆಡಿಎಸ್ ವಲಯದಲ್ಲಿ ಗಂಭೀರ ಚರ್ಚೆ ನಡೆದಿದೆ. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಈ ಕುರಿತು ಅಂತಿಮ ನಿರ್ಧಾರ ತೆಗೆದುಕೊಳ್ಳಲು ಶನಿವಾರ ಸಂಜೆ ಶಾಸಕರ ಸಭೆ ನಡೆಸಿದರು.

## ಮಂಜೇಶ್ ಕೊಲೆ ಮಾಡಿ ಲಾಡ್ಜ್‌ನಲ್ಲಿದ್ದ ಆರೋಪಿಗಳು

» ಮೊದಲನೇ ಪುಟದಿಂದ

ಆರೋಪಿಗಳೆಲ್ಲರೂ ಅಪರಾಧ ಹಿನ್ನಲೆಯುಳ್ಳವರಾಗಿದ್ದಾರೆಂದರು.

**ಹಳೆಯ ವೈಷಮ್ಯದಿಂದ ಮಂಜೇಶ್ ಕೊಲೆ**

ರೌಡಿಶೀಟರ್ ಮಂಜೇಶ್ ವಿರುದ್ಧ ಬೆಂಗಳೂರಿನಲ್ಲಿ ಮೂರು ಕೊಲೆ ಪ್ರಕರಣ ದಾಖಲಾಗಿದ್ದವು. 2020ರಲ್ಲಿ ನಡೆದಿದ್ದ ಪ್ರಕರಣಕ್ಕೆ ಪ್ರತೀಕಾರವಾಗಿ ಮಂಜೇಶ್ ಹತ್ಯೆ ನಡೆದಿರಬಹುದೆಂಬ ಸಂಶಯ ವ್ಯಕ್ತವಾಗಿದೆ.

ಮಂಜೇಶ್‌ನ ಹತ್ಯೆಗೆ ಸಂಚು ರೂಪಿಸಿದ್ದ ತಂಡ ಅವಕಾಶಕ್ಕಾಗಿ ಕಾಯುತ್ತಿತ್ತು. ಆತನನ್ನು ಚಿಕ್ಕಮಗಳೂರು ಜಿಲ್ಲೆಗೆ ಗಡಿಪಾರು ಮಾಡಿರುವ ವಿಚಾರ ತಿಳಿದ ಆರೋಪಿಗಳು ಕಾರಿನಲ್ಲಿ ಅಲ್ಲಿಗೆ ತೆರಳಿದ್ದರು. ಎಲ್ಲರೂ ಒಂದಲ್ಲಾ ಒಂದು ಪ್ರಕರಣದಲ್ಲಿ ಅಪರಾಧ ಹಿನ್ನಲೆಯವರೇ ಆಗಿದ್ದರಿಂದ ಸಾಕ್ಷ್ಯ ನಾಶಕ್ಕಾಗಿ ಸರ್ವ ತಯಾರಿ ಮಾಡಿಕೊಂಡಿದ್ದರು. ಯಾರೂ ಮೊಬೈಲ್ ಬಳಸಿರಲಿಲ್ಲ. ಚಿಕ್ಕಮಗಳೂರಿನಲ್ಲಿ ಮಂಜೇಶ್ ಕೊಲೆಗೆ ಸಮಯ ಕೂಡಿ ಬಂದಿಲ್ಲ. ಆಗ ಒಬ್ಬ ಆರೋಪಿ ಮಂಜೇಶ್‌ನ ಸಂಪರ್ಕ ಸಾಧಿಸಿ ಬೆಂಗಳೂರಿನ ನಿಮ್ಮ ಸಹೋದರಿ ಮನೆಗೆ ಹೋಗೋಣವೆಂದು ಪುಸಲಾಯಿಸಿದ್ದಾನೆ. ಕೊಲೆಗಾರರು ಜೊತೆಗೆ ಇದ್ದರೂ ಅರಿಯದ ಮಂಜೇಶ್ ಆತನ ಮಾತು ನಂಬಿ ಕೆಎಸ್‌ಆರ್‌ಟಿಸಿ ಬಸ್ ಹತ್ತಿದ್ದಾನೆ. ಬಸ್ ಹಿಂದೆಯೇ ಆರೋಪಿಗಳ ಕಾರು ಹಿಂಬಾಲಿಸಿಕೊಂಡು ಬಂದಿದೆ. ಖಾಸಗಿ ಬಸ್‌ನಲ್ಲಿ ತೆರಳಬೇಕೆಂದು ಮಂಜೇಶ್ ಹಾಸನ ಹೊಸ ಬಸ್ ನಿಲ್ದಾಣದಲ್ಲಿ ಇಳಿದು ನಡೆದು ಹೋಗುತ್ತಿದ್ದಾಗ ಏಕಾಏಕಿ ಕಾರಿನಲ್ಲಿ ಕೂರಿಸಿಕೊಂಡ ಆರೋಪಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಪರಾರಿಯಾಗಿದ್ದಾರೆ. ತಡರಾತ್ರಿಯಾದ್ದರಿಂದ ಸಾರ್ವಜನಿಕರ ಓಡಾಟ ಇಲ್ಲದಿರುವುದು ಕುಕೃತ್ಯಕ್ಕೆ ನೆರವಾಗಿದೆ ಎಂದು ಮೂಲಗಳು ತಿಳಿಸಿವೆ.

## ನೀಟ್ ಅಕ್ರಮ ಖಂಡಿಸಿ ಯುವ ಕಾಂಗ್ರೆಸ್ ಪ್ರತಿಭಟನೆ

» ಮೊದಲನೇ ಪುಟದಿಂದ

ಪ್ರತಿವರ್ಷ ಲಕ್ಷಾಂತರ ವಿದ್ಯಾರ್ಥಿಗಳು ಹಲವು ವರ್ಷ ಕಠಿಣ ಪರಿಶ್ರಮದೊಂದಿಗೆ ಸಿದ್ಧತೆ ನಡೆಸುತ್ತಾರೆ. ಆದರೆ, ಪರೀಕ್ಷೆಯ ಪಾವಿತ್ರ್ಯಕ್ಕೆ ಧಕ್ಕೆ ಉಂಟು ಮಾಡುವ ರೀತಿಯಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯಂತಹ ಗಂಭೀರ ಆರೋಪಗಳು ಕೇಳಿ ಬಂದಿರುವುದು ದುರ ದೃಷ್ಟಕರ. ಇದು ವಿದ್ಯಾರ್ಥಿಗಳ ಭವಿಷ್ಯದ ಮೇಲೆ ದುಷ್ಪರಿಣಾಮಬೀರಿದೆ ಎಂದರು.

23 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಆದರೆ ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನಲೆ ಬರೆದ ಪರೀಕ್ಷೆ ರದ್ದಾಗಿ ಜೂ.21ಕ್ಕೆ ಮರು ನಿಗದಿಯಾಗಿದೆ. ವಿದ್ಯಾರ್ಥಿಗಳು ಮಾನಸಿಕ ಒತ್ತಡ, ಅನಿಶ್ಚಿತತೆ ಮತ್ತು ಭವಿಷ್ಯದ ಆತಂಕ ಎದುರಿಸುವಂತಾಗಿದೆ. ಹಲವು ರೀತಿಯ ಗೊಂದಲ ವಿದ್ಯಾರ್ಥಿಗಳು ಮತ್ತು ಪೋಷಕರನ್ನು ತೀವ್ರ ಸಂಕಷ್ಟಕ್ಕೆ ತಳ್ಳಿದೆ. ದೇಶದ ವಿವಿಧೆಡೆ ಮಕ್ಕಳು ಮಾನಸಿಕವಾಗಿ ಕುಗ್ಗಿ ಆತ್ಮಹತ್ಯೆಗೆ ಶರಣಾಗಿದ್ದಾರೆಂದರು.

ರಾಷ್ಟ್ರೀಯ ಪರೀಕ್ಷಾ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಸಮಗ್ರವಾಗಿ ಪರಿಶೀಲಿಸಿ, ಭವಿಷ್ಯದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಅಥವಾ ಅಕ್ರಮಗಳು ಮರುಕಳಿಸದಂತೆ ಅತ್ಯಾಧುನಿಕ ಭದ್ರತಾ ಕ್ರಮ ಜಾರಿಗೊಳಿಸಬೇಕು. ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಮತ್ತು ಶೈಕ್ಷಣಿಕ ಭವಿಷ್ಯ ಗಮನದಲ್ಲಿಟ್ಟುಕೊಂಡು ಸೂಕ್ತ ಬೆಂಬಲ ವ್ಯವಸ್ಥೆ ಕಲ್ಪಿಸುವುದರ ಜೊತೆಗೆ, ಪರೀಕ್ಷೆ ನಡೆಸುವ ಸಂಸ್ಥೆಗಳನ್ನು ಪುನರ್ ರಚಿಸಿ ಸಂಪೂರ್ಣ ಪಾರದರ್ಶಕ ಹಾಗೂ ವಿಶ್ವಾಸಾರ್ಹ ಪರೀಕ್ಷಾ ವ್ಯವಸ್ಥೆ ರೂಪಿಸುವ ಅಗತ್ಯವಿದೆ ಎಂದು ಹೇಳಿದರು.

ದೇಶದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಮತ್ತು ಶಿಕ್ಷಣ ವ್ಯವಸ್ಥೆಯ ಮೇಲಿನ ಸಾರ್ವಜನಿಕರ ನಂಬಿಕೆ ಉಳಿಸಿಕೊಳ್ಳುವ ದೃಷ್ಟಿಯಿಂದ ಕೇಂದ್ರ ಸರ್ಕಾರ ತ್ವರಿತ ಹಾಗು ಕಟ್ಟುನಿಟ್ಟಿನ ಕ್ರಮ ಕೈಗೊಂಡು ಹಗರಣದ ಸತ್ಯಾಸತ್ಯತೆ ಬಹಿರಂಗಪಡಿಸಬೇಕೆಂದು ಒತ್ತಾಯಿಸಿದರು.

ಪರೀಕ್ಷಾ ವ್ಯವಸ್ಥೆಯ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆಯ ಬಗ್ಗೆ ಜನರಲ್ಲಿ ಅನುಮಾನ ಮೂಡಿದೆ. ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯ ಮೂರ್ತಿಗಳ ನೇತೃತ್ವದಲ್ಲಿ ಸ್ವತಂತ್ರ ನ್ಯಾಯಾಂಗ ತನಿಖೆ ನಡೆಸಬೇಕು. ತಪ್ಪಿತಸ್ಥ ಅಧಿಕಾರಿಗಳು, ಮಧ್ಯವರ್ತಿ ಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸಿ ಇಂತಹ ಕೃತ್ಯಗಳು ಮರುಕಳಿಸದಂತೆ ಕಡಿವಾಣ ಹಾಕಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ರಂಜಿತ್, ಮುಖಂಡರಾದ ದೇವರಾಜೇಗೌಡ, ತಾರಾ ಚಂದನ್, ರಘು ದಾಸರ ಕೊಪ್ಪಲು, ರಾಮಚಂದ್ರ, ಇಸ್ಮಾಯಿಲ್ ಮತ್ತಿತರರಿದ್ದರು.

## ಮಕ್ಕಳ ಹಕ್ಕು ಉಲ್ಲಂಘನೆಯಾಗದಂತೆ ಎಚ್ಚರ ವಹಿಸಿ

» ಮೊದಲನೇ ಪುಟದಿಂದ

ಭಾಷಣಗಳಿಗೆ ಮಾತ್ರ ಸೀಮಿತವಾಗದೆ ನಮ್ಮ ಸುತ್ತಮುತ್ತಲಿನ ಮಕ್ಕಳ ಶೋಷಣೆಯ ವಿರುದ್ಧ ಧ್ವನಿ ಎತ್ತುವಂತಹ ಕೆಲಸ ಮಾಡಬೇಕೆಂದರು.

ಬಡತನ ಮತ್ತು ಅರಿವಿನ ಕೊರತೆಯೇ ಈ ಸಮಸ್ಯೆಗೆ ಮೂಲ ಕಾರಣ. ಪ್ರತಿಯೊಂದು ಮಗುವಿಗೆ ಗುಣಮಟ್ಟದ ಶಿಕ್ಷಣ ಸಿಗುವಂತೆ ಮಾಡುವುದು ಮತ್ತು ಅವರ ಕುಟುಂಬಗಳಿಗೆ ಸಾಮಾಜಿಕ ಭದ್ರತೆ ಒದಗಿಸುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ ಎಂದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ ಅವರು ಮಾತನಾಡಿ, ಕಾನೂನು ಬಗ್ಗೆ ಪ್ರತಿಯೊಬ್ಬರಲ್ಲೂ ತಿಳಿವಳಿಕೆ ಇರಬೇಕು. ಮಕ್ಕಳನ್ನು ದುಡಿಮೆಗೆ ಬಳಸಿಕೊಳ್ಳಬಾರದು. ಪ್ರತಿಯೊಬ್ಬ ಮಗುವಿಗೂ ತನ್ನದೇ ಆದ ಕನಸುಗಳನ್ನು ಕಾಣುವ ಮತ್ತು ಅದನ್ನು ನನಸು ಮಾಡಿಕೊಳ್ಳುವ ಹಕ್ಕಿದೆ. ಆದರೆ ಬಾಲ ಕಾರ್ಮಿಕ ಪದ್ಧತಿಯು ಅವರ ಬಾಲ್ಯವನ್ನು ಕಸಿದುಕೊಳ್ಳುತ್ತದೆ ಮತ್ತು ಅವರ ಭವಿಷ್ಯವನ್ನು ಕತ್ತಲೆಗೆ ನೂಕುತ್ತದೆ. ಬಾಲ ಕಾರ್ಮಿಕರನ್ನು ಪತ್ತೆ ಹಚ್ಚಿ ಅವರಿಗೆ ಉತ್ತಮ ಶಿಕ್ಷಣ ಕಲ್ಪಿಸಬೇಕೆಂದರು.



ವಕೀಲ ಬಿ.ಚಂದ್ರಶೇಖರ್ ಅವರು ಮಾತನಾಡಿ, ಬಾಲ ಕಾರ್ಮಿಕ ಪದ್ಧತಿ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಲಕ್ಷಾಂತರ ಮಕ್ಕಳಿಗೆ ಶಿಕ್ಷಣ, ಉತ್ತಮ ಬಾಲ್ಯ ಖಚಿತಪಡಿಸುವುದು ಪೋಷಕರ ಜವಾಬ್ದಾರಿಯಾಗಿದೆ ಎಂದರು.

ಕಾರ್ಯಕ್ರಮದ ಅಂಗವಾಗಿ ಜಿಲ್ಲಾಧಿಕಾರಿ ಕಚೇರಿ ಆವರಣದಿಂದ ಹಾಸನಾಂಬ ಕಲಾಕ್ಷೇತ್ರದ ವರೆಗೆ ಆಯೋಜಿಸಿದ್ದ ಜಾಗೃತಿ ಜಾಥಾಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಜಿ.ಕೆ. ದಾಕ್ಷಾಯಿಣಿ ಅವರು ಚಾಲನೆ ನೀಡಿದರು. ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಎಂ.ಎಸ್.ಮಧುಕುಮಾರಿ, ಪ್ರಾದೇಶಿಕ ಉಪಕಾರ್ಮಿಕ ಆಯುಕ್ತ ಹೆಚ್.ಎಲ್.ಗುರುಪ್ರಸಾದ್, ಕಾರ್ಮಿಕ ಅಧಿಕಾರಿ ಹೆಚ್.ಆರ್. ಆನಂದ್ ರಾಮು, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ ಯೋಜನಾ ನಿರ್ದೇಶಕಿ ಹೆಚ್. ಕನಕಲಕ್ಷ್ಮಿ ಮತ್ತಿತರರಿದ್ದರು.

## ಅಪಾಯಕಾರಿ ಮರಗಳ ತೆರವಿಗೆ ಅಡ್ಡಿ: ಗ್ರಾಮಸ್ಥರ ಆರೋಪ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ಬಳ್ಳೂರು ಗ್ರಾಮದಲ್ಲಿ ರಸ್ತೆ ಬದಿಯಲ್ಲಿ ಅಪಾಯಕಾರಿಯಾಗಿ ಬಾಗಿ ನಿಂತಿರುವ ಮರಗಳ ತೆರವು ಪ್ರಕ್ರಿಯೆ ವಿವಾದಕ್ಕೆ ಕಾರಣವಾಗಿದೆ. ಅರಣ್ಯ ಇಲಾಖೆಯ ಅನುಮತಿ ಹಾಗು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದರೂ ಸಾಲುಮರದ ತಿಮ್ಮಕ್ಕ ಅವರ ದತ್ತುಪುತ್ರ ಉಮೇಶ್ ಅವರು ಕಾಮಗಾರಿಗೆ ಅಡ್ಡಿಪಡಿಸುತ್ತಿದ್ದಾರೆಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಸಾರ್ವಜನಿಕರ ಜೀವ ಹಾಗು ಆಸ್ತಿ ರಕ್ಷಣೆಗಾಗಿ ಗ್ರಾಮಸ್ಥರ ಮನವಿಯ ಮೇರೆಗೆ ಅರಣ್ಯ ಇಲಾಖೆ ನಾಲ್ಕು ತಿಂಗಳ ಪರಿಶೀಲನೆಯ ಬಳಿಕ ಮರ ತೆರವಿಗೆ ಅನುಮತಿ ನೀಡಿತ್ತು. ಅಧಿಕಾರಿಗಳು ಮತ್ತು ಗುತ್ತಿಗೆದಾರರು ಸ್ಥಳಕ್ಕೆ ಆಗಮಿಸಿದ ವೇಳೆ ಕೆಲಸಕ್ಕೆ ತಡೆಯೊಡ್ಡಲಾಗಿದೆ ಎಂದು ಗ್ರಾಮಸ್ಥರು ದೂರಿದ್ದಾರೆ.

ಒಂದು ವೇಳೆ ಮರಗಳು ಉರುಳಿದರೆ ರಸ್ತೆ ಸಂಚಾರಕ್ಕೆ ತೊಂದರೆಯಾಗುವುದರ ಜೊತೆಗೆ ವಿದ್ಯುತ್ ಕಂಬಗಳು ಹಾನಿಗೊಳಗಾಗಿ ದೊಡ್ಡ ಪ್ರಮಾಣದ ಅವಘಡ ಸಂಭವಿಸುವ ಸಾಧ್ಯತೆ ಇದೆ. ಈ ಹಿಂದೆ ಗ್ರಾಮದಲ್ಲಿ ಮರ ಬಿದ್ದು ಸಾವು ಹಾಗು ಆಸ್ತಿ ಹಾನಿ ಸಂಭವಿಸಿರುವುದನ್ನು ಉಲ್ಲೇಖಿಸಿದ ಗ್ರಾಮಸ್ಥರು, ಅಪಾಯಕಾರಿ ಮರಗಳ ತೆರವಿಗೆ ವಿಳಂಬ ಮಾಡಬಾರದೆಂದು ಒತ್ತಾಯಿಸಿದ್ದಾರೆ.



ಅರಣ್ಯ ಇಲಾಖೆ ಅಧಿಕಾರಿಗಳು, ಸ್ಥಳೀಯ ಶಾಸಕರು ಹಾಗು ತಹಶೀಲ್ದಾರ್ ತಕ್ಷಣ ಗ್ರಾಮಕ್ಕೆ ಭೇಟಿ ನೀಡಿ ಜಂಟಿ ಪರಿಶೀಲನೆ ನಡೆಸಿ ಅಪಾಯಕಾರಿ ಮರಗಳನ್ನು ವೈಜ್ಞಾನಿಕವಾಗಿ ಗುರುತಿಸಿ ತೆರವುಗೊಳಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

### ರೈತ ಮೋರ್ಚಾಕ್ಕೆ ಪದಾಧಿಕಾರಿಗಳ ನೇಮಕ

• ಪ್ರಜೋದಯ ವರದಿ

**ಹಾಸನ:** ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಸೂಚನೆ ಮೇರೆಗೆ ಜಿಲ್ಲಾ ರೈತ ಮೋರ್ಚಾ ಘಟಕಕ್ಕೆ ವಿವಿಧ ಪದಾಧಿಕಾರಿಗಳನ್ನು ನೇಮಿಸಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಬಿ.ಹೆಚ್. ನಾರಾಯಣಗೌಡ ಅವರು ಆದೇಶ ಹೊರಡಿಸಿದ್ದಾರೆ.

ಉಪಾಧ್ಯಕ್ಷರನ್ನಾಗಿ ಎಸ್. ಮಹೇಶ್, ಚಂದ್ರಶೇಖರ್, ಬಿ.ಆರ್. ಕನಕರಾಜು, ಕೆಳೇಹಳ್ಳಿ ಪರ್ವತೇಗೌಡ (ರಾಜು), ಪುಟ್ಟಸ್ವಾಮಿಗೌಡ ಅವರನ್ನು ನೇಮಿಸಿದ್ದಾರೆ. ಕಾರ್ಯದರ್ಶಿಗಳಾಗಿ ಎಂ.ಬಿ.ಅಶೋಕ್, ಹರೀಶ್, ಶಕುನಿಗೌಡ, ನಿತಿನ್, ರಂಗೇಗೌಡ ಹಾಗು ಖಜಾಂಚಿಯಾಗಿ ಜಿ.ಕೆ.ಭರತ್ ಭೂಷಣ್ ಅವರನ್ನು ನೇಮಿಸಲಾಗಿದೆ.

## ಜೂ.30ರಿಂದ ಎಸ್‌ಐಆರ್ ಮಹಾ ಅಭಿಯಾನ



• ಪ್ರಜೋದಯ ವರದಿ

**ಅರಸೀಕೆರೆ:** ಮತದಾರರ ಪಟ್ಟಿಯನ್ನು ಸಂಪೂರ್ಣ ದೋಷಮುಕ್ತ ಹಾಗು ಆಧುನಿಕ ಗೊಳಿಸುವ ಉದ್ದೇಶದಿಂದ ಚುನಾವಣಾ ಆಯೋಗದ ನಿರ್ದೇಶನದಂತೆ ಜೂನ್ 30ರಿಂದ ಜುಲೈ 29ರ ವರೆಗೆ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಮಹಾ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ತಹಶೀಲ್ದಾರ್ ಎಂ.ಜೆ.ಸಂತೋಷ್ ಕುಮಾರ್ ಅವರು ತಿಳಿಸಿದರು.

ತಾಲ್ಲೂಕು ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಅವಧಿಯಲ್ಲಿ ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆ-ಮನೆಗೆ ಭೇಟಿ ನೀಡಿ ಮತದಾರರ ಮಾಹಿತಿ ಸಂಗ್ರಹಿಸಲಿದ್ದು, ಹೊಸ ಮತದಾರರ ಸೇರ್ಪಡೆ, ತಿದ್ದುಪಡಿ ಹಾಗು ಅನರ್ಹ ಮತ ದಾರರ ಹೆಸರು ಕೈಬಿಡುವ ಕಾರ್ಯ ಕೈಗೊಳ್ಳಲಿದ್ದಾರೆ ಎಂದರು.

ಆ.5ರಂದು ಕರಡು ಮತದಾರರ ಪಟ್ಟಿ ಪ್ರಕಟವಾಗಲಿದ್ದು, ಸೆ.4ರ ವರೆಗೆ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ. ಅ.7ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಗೊಳ್ಳಲಿದೆ. ತಾಲ್ಲೂಕಿನ 325 ಮತಗಟ್ಟೆಗಳಲ್ಲಿ ಪರಿಷ್ಕರಣೆ ಕಾರ್ಯ ನಡೆಯ ಲಿದ್ದು, ಒಟ್ಟು 2,65,365 ಮತದಾರರು ಇದರ ವ್ಯಾಪ್ತಿಗೆ ಒಳಪಡಲಿದ್ದಾರೆ. ಮತದಾರರ ಅನುಕೂಲಕ್ಕಾಗಿ ಗ್ರಾಮ ಪಂಚಾಯಿತಿ ಹಾಗು ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಸಹಾಯ ಕೇಂದ್ರಗಳನ್ನು ತೆರೆಯಲಾ ಗಿದ್ದು, ವಯೋವೃದ್ಧರು, ಅಂಗವಿಕ ಲರು, ಅನಾರೋಗ್ಯ ಪೀಡಿತರಿಗೆ ವಿಶೇಷ ನೆರವು ಒದಗಿಸಲಾಗುತ್ತಿದೆ ಎಂದರು.

ಮತಗಟ್ಟೆ ಅಧಿಕಾರಿಗಳಿಗೆ ಜೂನ್ 20 ರಿಂದ 25ರವರೆಗೆ ವಿಶೇಷ ತರಬೇತಿ ನೀಡಲಾಗುವುದು. ಸಾರ್ವಜನಿಕರು ಈ ಮಹಾ ಅಭಿಯಾನದಲ್ಲಿ ಸಕ್ರಿಯ ವಾಗಿ ಭಾಗವಹಿಸಿ ಸಹಕರಿಸುವಂತೆ ಅವರು ಮನವಿ ಮಾಡಿದರು.

ಉಪ ತಹಶೀಲ್ದಾರ್ ಪಾಲಾಕ್ಷ, ಚುನಾವಣಾ ವಿಭಾಗದ ಶಿರಸ್ತೇದಾರ್ ಹೇಮಾ ಉಪಸ್ಥಿತರಿದ್ದರು.

## ಗ್ರಾ.ಪಂ. ಮಹಿಳಾ ಸಿಬ್ಬಂದಿ ಹೊಡೆದಾಟ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕೆಲಸದ ವಿಚಾರವಾಗಿ ತಾಲ್ಲೂಕಿನ ದಿಡಗ ಗ್ರಾಮ ಪಂಚಾಯಿತಿಯ ಇಬ್ಬರು ಮಹಿಳಾ ಸಿಬ್ಬಂದಿ ಪರಸ್ಪರ ಹೊಡೆದಾಡಿಕೊಂಡಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ದ್ವಿತೀಯ ದರ್ಜೆ ಸಹಾಯಕಿ (ಎಸ್‌ಡಿಎ) ಉಮಾ ಎಂಬುವವರು ಹೊರ ಗುತ್ತಿಗೆ ಸಿಬ್ಬಂದಿ ಜ್ಯೋತಿ ಎಂಬುವವರ ಮೇಲೆ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೆ.ಎಸ್.ಪ್ರಕಾಶ್ ಅವರ ಎದುರೇ ಗಲಾಟೆ ನಡೆದಿದ್ದು ದೃಶ್ಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಎಸ್‌ಡಿಎ ಉಮಾ ಸೇವೆಗೆ ಹಾಜರಾಗಿ ಆರು ತಿಂಗಳಷ್ಟೇ ಕಳೆದಿದೆ. ಆದರೆ ಲಾಗಿನ್, ಹಾಜರಾತಿ ನಮೂದಿಸುವಾಗ ಜ್ಯೋತಿ ತಾರತಮ್ಯ ಮಾಡುತ್ತಿದ್ದರು. ನನಗೆ ಕೆಲಸ ಮಾಡಲು ಅವಕಾಶ ನೀಡುತ್ತಿಲ್ಲವೆಂದು ಉಮಾ ಆಕ್ರೋಶದಿಂದ ಹೊಡೆದಿದ್ದಾರೆ ಎನ್ನಲಾಗಿದೆ.

ಇಬ್ಬರಿಗೂ ಕೆಲಸ ಹಂಚಿಕೆ ಮಾಡಲಾಗಿದೆ. ಹೊಂದಾಣಿಕೆ ಕೊರತೆಯಿಂದ ಸಮಸ್ಯೆಯಾಗಿದೆ. ಇಬ್ಬರಿಗೂ ಬುದ್ಧಿವಾದ ಹೇಳಿ ಮುಂದೆ ಹೀಗೆ ವರ್ತಿಸದಂತೆ ನಿರ್ದೇಶನ ನೀಡಲಾಗಿದೆ ಎಂದು ಪಿಡಿಓ ಕೆ.ಎಸ್.ಪ್ರಕಾಶ್ ಅವರು ಪ್ರತಿಕ್ರಿಯಿಸಿದರು.




## ಕಿತ್ತಾವರ ಗ್ರಾಮದಲ್ಲಿ ಅಕ್ರಮ ಮದ್ಯ ಮಾರಾಟ: ಆಕ್ರೋಶ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ಅರೇಹಳ್ಳಿ ಹೋಬಳಿ ಅನುಘಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಿತ್ತಾವರ ಗ್ರಾಮದಲ್ಲಿ ಅಕ್ರಮ ಮದ್ಯ ಮಾರಾಟ ಮಿತಿ ಮೀರಿದ್ದು ಕಡಿವಾಣ ಹಾಕಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಹೆಗ್ಗಡಿಹಳ್ಳಿ ಗ್ರಾಮಸ್ಥ ಜಗದೀಶ್ ಅವರು ಮಾತನಾಡಿ, ಕಿತ್ತಾವರ ಗ್ರಾಮದ ಅಂಗಡಿ ಹಾಗು ಮನೆಗಳಲ್ಲಿ ಅಕ್ರಮ ಮದ್ಯ ಮಾರಾಟ ನಡೆಯುತ್ತಿದೆ. ಅದರಿಂದ ಬಡಕುಟುಂಬಗಳು ಹಾಳಾಗುತ್ತಿವೆ. ಯುವಕರು ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಕುಡಿದೇ ಕೆಲಸಕ್ಕೆ ತೆರಳುತ್ತಿರುವ ಕಾರ್ಮಿಕರು ಅಲ್ಲಿ ಸಂಭವಿಸುವ ಕೆಲ ದುರ್ಘಟನೆಗಳಿಂದ ಮೃತಪಟ್ಟ ಘಟನೆಯು ನಡೆದಿದೆ. ದೋಲನಮನೆ, ಹೆಗ್ಗಡಿಹಳ್ಳಿ, ಕಡೇನಹಳ್ಳಿಯಲ್ಲಿ ಮದ್ಯ ಮಾರಾಟವು ನಡೆಯದಿದ್ದರೂ ಕಿತ್ತಾವರದಲ್ಲಿ ಸಿಗುವ ಅಕ್ರಮ ಮದ್ಯದಿಂದ ಗ್ರಾಮಗಳ ನೆಮ್ಮದಿ ಹಾಳಾಗಿದೆ ಎಂದರು.

ದೋಲನಮನೆಯ ತಂಗರಾಜು ಅವರು ಮಾತನಾಡಿ, ಅಕ್ರಮ ಮದ್ಯ ಮಾರಾಟದ ವಿಚಾರ ಅರೇಹಳ್ಳಿ ಪೊಲೀಸ್ ಅಧಿಕಾರಿಗಳಿಗೆ ತಿಳಿದಿದ್ದರೂ ಕ್ರಮ ಜರುಗಿಸಿಲ್ಲ. ಯುವಕರು ಕುಡಿತಕ್ಕೆ ದಾಸರಾಗುತ್ತಿದ್ದಾರೆ. ಅಕ್ಕಪಕ್ಕದ ಗ್ರಾಮಗಳು ಹಾಳಾಗಲು ಕಿತ್ತಾವರ ಗ್ರಾಮದ ಮದ್ಯ ಮಾರಾಟಗಾರರು ಕಾರಣರಾಗಿದ್ದಾರೆ. ತಕ್ಷಣವೇ ಅಕ್ರಮ ಮದ್ಯ ಮಾರಾಟಗಾರರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಹೋರಾಟ ನಡೆಸಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು.



ಕಿತ್ತಾವರ ಗ್ರಾಮದ ಕೆ.ಎಂ. ಕುಮಾರ್ ಅವರು ಮಾತನಾಡಿ, ಅಕ್ರಮ ಮದ್ಯ ಮಾರಾಟಗಾರರ ಸಂಪೂರ್ಣ ವಿವರ ಇದ್ದರೂ ಪೊಲೀಸರು ಕ್ರಮ ಜರುಗಿಸುತ್ತಿಲ್ಲ. ಶಾಲೆಯ ಆವರಣದಲ್ಲಿ ಖಾಲಿ ಪ್ಯಾಕೆಟ್‌ಗಳನ್ನು ಎಸೆಯುತ್ತಿರುವುದರಿಂದ ಇದು ವಿದ್ಯಾರ್ಥಿಗಳ ಮೇಲೆ ವ್ಯತಿರಿಕ್ತ ಪರಿ ಣಾಮ ಬೀರುತ್ತಿದೆ. ಸ್ಥಳೀಯವಾಗಿ ದೊರೆಯುತ್ತಿರುವ ಮದ್ಯದಿಂದ ವಿದ್ಯಾರ್ಥಿಗಳು ಕುಡಿದೇ ಶಾಲೆಗೆ ಹೋದ ಘಟನೆಯು ನಡೆದಿದ್ದು ಇದು ಮದ್ಯ ಮಾರಾಟದಿಂದ ಉಂಟಾಗುತ್ತಿರುವ ಗಂಭೀರ ಪರಿಣಾಮವಾಗಿದೆ. ಭವಿಷ್ಯದ ಪ್ರಜೆಗಳು ಕುಡಿತದ ಚಟಕ್ಕೆ ಬಲಿಯಾಗುತ್ತಿದ್ದಾರೆಂದರು.

## ದೊಡ್ಡಮಗ್ಗೆಯಲ್ಲಿ ವಲಸೆ ಕಾರ್ಮಿಕರಿಗೆ ಆರೋಗ್ಯ ಶಿಬಿರ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ದೊಡ್ಡಮಗ್ಗೆ ಗ್ರಾಮದ ಮಗ್ಗೆ ತೋಟದಲ್ಲಿ ವಲಸೆ ಕಾರ್ಮಿಕರಿಗೆ ಆರೋಗ್ಯ ಉಚಿತ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಆರೋಗ್ಯ ಇಲಾಖೆ ವತಿಯಿಂದ ನಡೆದ ಶಿಬಿರದಲ್ಲಿ ಹೊರ ರಾಜ್ಯದ ಕೇರಳ, ಬಿಹಾರ, ಉತ್ತರ ಪ್ರದೇಶ ಮುಂತಾದ ಕಡೆಯಿಂದ ವಲಸೆ ಬಂದಿದ್ದ ಕಾರ್ಮಿಕರಿಗೆ ಹಾಗು ಸಿಬ್ಬಂದಿ ವರ್ಗದವರಿಗೆ ಆರೋಗ್ಯ ತಪಾಸಣೆ ಮತ್ತು ಅರಿವು ಕಾರ್ಯಕ್ರಮ ಕೈಗೊಳ್ಳಲಾಯಿತು. ಶಿಬಿರದಲ್ಲಿ ಸುಮಾರು 50ಕ್ಕಿಂತ ಹೆಚ್ಚು ಕಾರ್ಮಿಕರಿಗೆ ಹೆಚ್‌ಐವಿ ಸಿಫಿಲಿಸ್, ಹೆಚ್‌ಬಿಎಸ್‌ಎಜಿ, ಮಧುಮೇಹ ಹಾಗು ಅಧಿಕ ರಕ್ತದ ಒತ್ತಡ ಮುಂತಾದ ಖಾಯಿಲೆಗಳ ಕುರಿತು ಮಾಹಿತಿ ಒದಗಿಸಿ ತಪಾಸಣೆ ಮಾಡಲಾಯಿತು.

ಸರ್ಕಾರಿ ಆಸ್ಪತ್ರೆಯ ಐಸಿಟಿಸಿ ವಿಭಾಗದ ಆಪ್ತ ಸಮಾಲೋಚಕ ಪರಶುರಾಮ ಶಿರೂರ, ಪ್ರಯೋಗ ಶಾಲಾ ತಂತ್ರಜ್ಞೆ ಗೌರಮ್ಮ, ಎನ್‌ಸಿಡಿ ವಿಭಾಗದ ಡಾ.ಪ್ರೀತಮ್, ಆಪ್ತ ಸಮಾಲೋಚಕ ಉಮೇಶ್, ಶುಶ್ರೂಷಕ ಅಧಿಕಾರಿ ಲಲಿತ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಪರಮೇಶ್, ಪ್ರಯೋಗ ಶಾಲಾ ತಂತ್ರಜ್ಞಾನದ ಶೋಭಾ, ಜಯಪ್ರಕಾಶ್, ನಾರಾಯಣ್, ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಪ್ರಕಾಶ್, ಸಿಬ್ಬಂದಿ ವರ್ಗ, ಆಶಾ ಕಾರ್ಯಕರ್ತೆಯರು ಭಾಗಿಯಾದರು.




## ಜೂ.25 ರಿಂದ 28ರ ವರೆಗೆ ಯೋಗ ತರಬೇತಿ ಶಿಬಿರ

• ಪ್ರಜೋದಯ ವರದಿ

**ಹಾಸನ:** ಮಕ್ಕಳಲ್ಲಿ ನೆನಪಿನ ಶಕ್ತಿ, ಏಕಾಗ್ರತೆ, ಮೊಬೈಲ್ ಬಳಕೆ ಕಡಿಮೆ ಮಾಡುವುದು ಸೇರಿ ಸೃಜನಶೀಲತೆ ಹಾಗು ಆತ್ಮವಿಶ್ವಾಸ ವೃದ್ಧಿಸುವ ಉದ್ದೇಶದಿಂದ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಿಂದ ಮಕ್ಕಳಿಗಾಗಿ ಪ್ರಜ್ಞಾ ಯೋಗ ತರಬೇತಿ ಶಿಬಿರವನ್ನು ಜೂ.25 ರಿಂದ 28ರ ವರೆಗೆ ನಗರದ ಮಹಾರಾಜ ಪಾರ್ಕ್‌ನ ಯೋಗ ಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಶಿಕ್ಷಕ ಜಿ.ಎ. ಸುಬ್ಬುಕೃಷ್ಣ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಶಿಬಿರವು ನಾಲ್ಕು ದಿನಗಳ ಕಾಲ ವಿವಿಧ ಅವಧಿಗಳಲ್ಲಿ ನಡೆಯಲಿದ್ದು, ಜೂ.25ರ ಬೆಳಿಗ್ಗೆ 6 ರಿಂದ 9 ಗಂಟೆ, ಜೂ.26 ರಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 2, ಜೂ.27 ರಂದು ಸಂಜೆ 4ರಿಂದ ರಾತ್ರಿ 8 ಗಂಟೆವರೆಗೆ ಹಾಗು ಜೂ.28ರ ಕಡೆಯ ದಿನ ಬೆಳಿಗ್ಗೆ 9 ರಿಂದ ಮಧ್ಯಾಹ್ನ 2 ಗಂಟೆ ವರೆಗೆ ನಡೆಯಲಿದೆ. ಶಿಬಿರದ ನಂತರ ಜೂ. 29 ರಿಂದ ಜುಲೈ 4ರ ವರೆಗೆ ಆನ್‌ಲೈನ್ ಮೂಲಕ ಮುಂದುವರಿದ ಪಠ್ಯಕ್ರಮ, ತರಬೇತಿ ಹಾಗು ಮಾರ್ಗದರ್ಶನ ನೀಡಲಾಗುವುದೆಂದರು.




ಬೆಂಗಳೂರು ಆರ್ಟ್ ಆಫ್ ಲಿವಿಂಗ್ ಅಂತಾರಾಷ್ಟ್ರೀಯ ಕೇಂದ್ರದ ಪೂರ್ಣಾವಧಿ ಶಿಕ್ಷಕ ಜಿ.ಚನ್ನವೀರ ಅವರು ಮಾತನಾಡಿ, ದೇಶಾದ್ಯಂತ ಮೂರು ಲಕ್ಷಕ್ಕೂ ಅಧಿಕ ಮಕ್ಕಳು ಶಿಬಿರದ ಪ್ರಯೋಜನ ಪಡೆದಿದ್ದಾರೆಂದು ಹೇಳಿದರು.

ಮಕ್ಕಳಲ್ಲಿ ಜ್ಞಾಪಕಶಕ್ತಿ, ಏಕಾಗ್ರತೆ, ಸೃಜನಶೀಲತೆ, ಆತ್ಮವಿಶ್ವಾಸ ಹಾಗು ವಿದ್ಯಾಭ್ಯಾಸದ ಮೇಲಿನ ಆಸಕ್ತಿ ಹೆಚ್ಚಾಗಿರುವುದು ಕಂಡುಬಂದಿದೆ. ಮಕ್ಕಳ ಅಂತಃಪ್ರಜ್ಞೆ ಜಾಗೃತಗೊಳ್ಳುವ ಮೂಲಕ ಕಣ್ಣು ಮುಚ್ಚಿ ಚಿತ್ರ ಬಿಡಿಸುವುದು, ಬಣ್ಣಗಳನ್ನು ಗುರುತಿಸುವುದು ಸೇರಿ ವಿವಿಧ ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಸಾಮರ್ಥ್ಯ ಬೆಳೆಸುವ ತರಬೇತಿ ನೀಡಲಾಗು ವುದೆಂದು ವಿವರಿಸಿದರು.

ನಗರಸಭೆ ನಿವೃತ್ತ ಆಯುಕ್ತ ಸಿ. ಆರ್.ಪರಮೇಶ್ವರಪ್ಪ ಅವರು ಮಾತನಾಡಿ, ಸುದರ್ಶನ ಕ್ರಿಯೆಯ ನಿಯಮಿತ ಅಭ್ಯಾಸದಿಂದ ಆರೋಗ್ಯ ಮತ್ತು ಜೀವನದಲ್ಲಿ ಉಂಟಾದ ಸಕಾರಾತ್ಮಕ ಬದಲಾವಣೆಗಳ ಕುರಿತು ಅನುಭವ ಹಂಚಿಕೊಂಡರು.

ಶಿಬಿರದಲ್ಲಿ ಪಾಲ್ಗೊಳ್ಳಲು ಇಚ್ಛಿಸುವವರು ಮೊ.ಸಂ. 9110256623, 9845173779 ಇಲ್ಲಿಗೆ ಕರೆ ಮಾಡಿ ಹೆಸರು ನೋಂದಾಯಿಸಬಹುದು. ಸುದ್ದಿಗೋಷ್ಠಿಯಲ್ಲಿ ಹೆಚ್.ವಿದ್ಯಾ ಇದ್ದರು.

## ಪುನಶ್ಚೇತನ ಕೃಷಿ ಪದ್ಧತಿ ಪ್ರಾತ್ಯಕ್ಷಿಕೆ-ಪರಿಕರ ವಿತರಣೆ

• ಪ್ರಜೋದಯ ವರದಿ

**ಸಕಲೇಶಪುರ:** ಸಮೀಪದ ಬಾಳೆಗದ್ದೆಯಲ್ಲಿರುವ ಜಿಲ್ಲಾ ಪ್ಲಾಂಟರ್ಸ್ ಅಸೋಷಿಯೇಷನ್ ಸಭಾಂಗಣದಲ್ಲಿ ಶುಕ್ರವಾರ ಕಾಫಿ ಬೆಳೆಗಾರರಿಗಾಗಿ ಸುಸ್ಥಿರ ಮತ್ತು ಪುನಶ್ಚೇತನ ಕೃಷಿ ಪದ್ಧತಿ ಉತ್ತೇಜಿಸುವ ನಿಟ್ಟಿನಲ್ಲಿ ಪ್ರಾತ್ಯಕ್ಷಿಕೆ, ತರಬೇತಿ ಹಾಗು ಕೃಷಿ ಪರಿಕರ ವಿತರಣೆ ಕಾರ್ಯಕ್ರಮ ನೆರವೇರಿತು.

ಎಸ್‌ಎಸ್‌ಆರ್‌ಡಿಪಿ ಸಂಸ್ಥೆ ವ್ಯವಸ್ಥಾಪಕ ಗಿರೀಶ್ ಅವರು ಮಾತನಾಡಿ, ಮಣ್ಣಿನ ಆರೋಗ್ಯ, ನೀರಿನ ಸಂರಕ್ಷಣೆ, ಜೀವ ವೈವಿಧ್ಯ, ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವಿಕೆ ಹಾಗು ರೈತರ ಜೀವನೋಪಾಯ ಸುಧಾರಣೆಯು ಪುನಶ್ಚೇತನ ಕೃಷಿಯ ಐದು ಪ್ರಮುಖ ಸ್ತಂಭ ಗಳಾಗಿವೆ ಎಂದರು.

ಸಕಲೇಶಪುರ ಕಾಫಿ ಮಂಡಳಿ ಹಿರಿಯ ಸಂಪರ್ಕಾಧಿಕಾರಿ ಡಾ.ರಂಜಿತ್ ಅವರು, ಮಣ್ಣಿನ ಪರೀಕ್ಷೆಯ ಮಹತ್ವ, ಜೈವಿಕ ಗೊಬ್ಬರ ಬಳಕೆ ಹಾಗು ಕಾಫಿ ರೋಗಗಳ ಸಾವಯವ ನಿಯಂತ್ರಣದ ಬಗ್ಗೆ ವಿವರಿಸಿದರು.

ಕ್ಷೇತ್ರಾಧಿಕಾರಿ ಕುಮಾರ್ ಅವರು, ಕಾಳುಮೆಣಸು ಬೆಳೆಯಲ್ಲಿ ರೋಗ ಮತ್ತು ಕೀಟ ನಿರ್ವಹಣೆ ಕುರಿತು ಮಾರ್ಗದರ್ಶನ ನೀಡಿದರು. ಮಲ್ಟಿಪ್ಲೆಕ್ಸ್ ಕಂಪನಿಯ ಹಿರಿಯ ಮಾರಾಟ ಪ್ರತಿನಿಧಿ ನಂದನ್, ಕಾಫಿ ಬೆಳೆಯಲ್ಲಿ ಸಮಗ್ರ ಪೋಷಕಾಂಶ ನಿರ್ವಹಣೆ ಹಾಗು ದ್ರವ ಸಾರಜನಕದ ಬಳಕೆಯ ವಿಧಾನಗಳನ್ನು ತಿಳಿಸಿದರು.




ಎಸ್‌ಎಸ್‌ಆರ್‌ಡಿಪಿ ಸಂಸ್ಥೆಯ ಯೋಜನಾ ನಿರ್ದೇಶಕ ಅಶೋಕ್ ಅವರು ಮಾತನಾಡಿ, ರೈತರು ಗುಣಮಟ್ಟದ ಕಾಫಿ ಉತ್ಪಾದಿಸಿ ಬ್ರ್ಯಾಂಡ್ ಮಾಡುವ ಮೂಲಕ ಮಾರುಕಟ್ಟೆ ಹಾಗು ಹೆಚ್ಚಿನ ಆದಾಯ ಗಳಿಸಬಹುದು. ಇಂಗಾಲ ಹೊರಸೂಸುವಿಕೆ ಕಡಿಮೆ ಮಾಡುವ ಈ ಕೃಷಿ ಪದ್ಧತಿಯಿಂದ ಮುಂದಿನ ದಿನಗಳಲ್ಲಿ ಕಾರ್ಬನ್ ಕ್ರೆಡಿಟ್ ಅವಕಾಶಗಳ ಮೂಲಕ ರೈತರಿಗೆ ಹೆಚ್ಚುವರಿ ಆದಾಯ ಒದಗಿಸಲು ಸಹಕರಿಸಲಾಗುವುದೆಂದು ಭರವಸೆ ನೀಡಿದರು.

ರೈತರಾದ ವೈ.ಸಿ.ರುದ್ರಪ್ಪ, ಚನ್ನಕೇಶವ, ಮಂಗಳ ಹಾಗು ತೀರ್ಥ ಅವರು, ಪುನಶ್ಚೇತನ ಕೃಷಿ ಅಳವಡಿಸಿಕೊಂಡ ನಂತರ ಮಣ್ಣಿನ ಆರೋಗ್ಯ ಮತ್ತು ಇಳುವರಿಯಲ್ಲಿ ಆದ ಧನಾತ್ಮಕ ಸುಧಾರಣೆಗಳ ಕುರಿತು ಅನುಭವ ಹಂಚಿಕೊಂಡರು.

**ಉಚಿತ ಕೃಷಿ ಪರಿಕರ ವಿತರಣೆ**

ರೈತರಿಗೆ ಹುರುಳಿ ಬೀಜ, ಕಾಂಪೋಸ್ಟ್ ಕಲ್ಚರ್, ಲಿಕ್ವಿಡ್ ನೈಟ್ರೋಜನ್ (ದ್ರವ ಸಾರಜನಕ), ಕಾಫಿ ಸ್ಪೆಷಲ್ ಸೂಕ್ಷ್ಮ ಪೋಷಕಾಂಶ, ಶಾಟ್ ಹೋಲ್ ಬೋರರ್ ನಿರ್ವಹಣಾ ಟ್ರ್ಯಾಪ್‌ಗಳು ವೈಟ್ ಸ್ಟೆಮ್ ಬೋರರ್ ನಿಯಂತ್ರಣದ ಸ್ಟಿಕ್ಕಿ ಟ್ರ್ಯಾಪ್‌ಗಳನ್ನು ವಿತರಿಸಲಾಯಿತು. ಎಸ್‌ಎಸ್‌ಆರ್‌ಡಿಪಿ ಸಂಸ್ಥೆಯ ಅಶೋಕ್, ಗಿರೀಶ್, ದಿವ್ಯ, ಕೃಷ್ಣಮೂರ್ತಿ, ಹೆಚ್‌ಯುಎಲ್, ಜೆಡಿಇ ಹಾಗು ಐಹೆಚ್ ಅಧಿಕಾರಿಗಳು ಹಾಜರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK